# ಆರ್ಬಿಟ್,ಹುಮನಾಬಾದ | ಸೇವಾ ಸಂಗಮ ಸಂಸ್ಥೆ, ಕಲಬುರಗಿ

ಸಮಾಜ ಸೇವಾ ಸಂಸ್ಥೆ, NH 65 ರೈಲ್ವೇ ನಿಲ್ದಾಣದ ಹತ್ತಿರ
ಹುಮ್ನಾಬಾದ ತಾಲೂಕು, ಬೀದರ್ ಜಿಲ್ಲೆ, ಕರ್ನಾಟಕ, 585330

ಸಮಾಜ ಸೇವಾ ಸಂಸ್ಥೆ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರ ಕೇಂದ್ರೀಯ ವಿದ್ಯಾಲಯ
ಹತ್ತಿರ, ಕೋಟ್ನೂರ (ಡಿ) ಜೇವರ್ಗಿ ರಸ್ತೆ ಕಲಬುರಗಿ 585102

# ಸೇವಾವಾಣಿ

ಜುಲೈ/July 2025






ಪುಜ್ಯ. ಡಾ॥ ರಾಬರ್ಟ್ ಮೈಕಲ್ ಮಿರಂದಾ
ಧರ್ಮಾಧ್ಯಕ್ಷರು, ಗುಲ್ಬರ್ಗಾ ಧರ್ಮಕ್ಷೇತ್ರ

ವಂ. ಫಾ॥ ವಿಕ್ಟರ್ ವಾಸ್ ನಿರ್ದೇಶಕರು,
ಆರ್ಬಿಟ್ ಮತ್ತು ಸೇವಾ ಸಂಗಮ ಸಂಸ್ಥೆ, ಗುಲ್ಬರ್ಗಾ

## "ಆರ್ಬಿಟ್ ಸಂಸ್ಥೆಯಲ್ಲಿ ಸಿಬ್ಬಂದಿ ಬಲವರ್ಧನೆಯ "ಒರಿಯಂಟೇಷನ್" ತರಬೇತಿ"

12 ಜೂನ 2025ರಂದು ಹುಮನಾಬಾದ ನಗರದ ಹೊರವಲಯದಲ್ಲಿರುವ ಆರ್ಬಿಟ್ ಸಂಸ್ಥೆಯಲ್ಲಿ ಆರ್ಬಿಟ್ ಮತ್ತು ಸೇವಾಸಂಗಮ ಎರಡು ಸಂಸ್ಥೆಯಲ್ಲಿರುವ ಸಿಬ್ಬಂದಿವರ್ಗದವರಿಗೆ ಒಂದು ದಿನದ ಸಿಬ್ಬಂದಿ ಬಲವರ್ಧನೆಯ "ಒರಿಯಂಟೇಷನ್" ತರಬೇತಿಯನ್ನು ಹಮ್ಮಿಕೊಳ್ಳಲಾಯಿತು. ಈ ತರಬೇತಿಗೆ ಸಂಪನ್ಮೂಲ ವ್ಯಕ್ತಿಯಾಗಿ, ಮದರ್ ತೆರೇಸಾ ಚಾರಿಟೇಬಲ್ ಟ್ರಸ್ಟ್ ಸಂಸ್ಥೆಯ ನಿರ್ದೇಶಕರಾದ ಫಾದರ್ ವಿನ್ಸೆಂಟ್ ಪಿರೇರಾ ಅವರು ಆರ್ಬಿಟ್ ಹಾಗೂ ಸೇವಾ ಸಂಗಮ ಸಂಸ್ಥೆಯ ಸಿಬ್ಬಂದಿ ವರ್ಗದವರಿಗೆ, ಸಮಾಜ ಸೇವಕರೆಂದರೆ ಸಮಾಜದ ಒಳಿತಿಗಾಗಿ ನಿಸ್ವಾರ್ಥ ಸೇವೆಯನ್ನು ಸಲ್ಲಿಸುವವರೆ ಸಮಾಜ ಸೇವಕರು. ಸಮಾಜ ಸೇವೆಯ ಕುರಿತು ಸವಿವರವಾಗಿ ಬೋಧಿಸಿದರು. ಒಬ್ಬ ಸಮಾಜ ಕಾರ್ಯಕರ್ತನು ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವ ಕುರಿತು ಹಾಗೂ ಎದುರಾಗುವ ಸಾವಾಲುಗಳಿಗೆ ಎದುರಿಸುವ ತಂತ್ರಗಳ ಕುರಿತು ವಿವರಿಸಿದರು. ತದನಂತರ ತರಬೇತಿಯಲ್ಲಿ ಭಾಗವಹಿಸಿದ ಕಾರ್ಯಕರ್ತರಿಗೆ ಗುಂಪು ಚರ್ಚೆ ಚಟುವಟಿಕೆಯಾನ್ನು ನೀಡಿ, ಕ್ಷೇತ್ರದಲ್ಲಿ ಕಂಡುಬರುವ ಸಮಸ್ಯೆಗಳು ಹಾಗೂ ಸವಾಲುಗಳು, ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಯು ಇನ್ನೂ ತಲುಪಲಾಗದ ಕ್ಷೇತ್ರಗಳು. ಸಮಾಜ ಸೇವೆಗೆ ಅಗತ್ಯವಿರುವ 3 ಗುಣಗಳ ಕುರಿತು ತರಬೇತಿಯಲ್ಲಿ ಭಾಗವಹಿಸಿದ ಕಾರ್ಯಕರ್ತರಿಂದ ಅಭಿಪ್ರಾಯ ಸಂಗ್ರಹಿಸಿದರು. ಈ ತರಬೇತಿಯಲ್ಲಿ ಪೂಜ್ಯ ಗುರುಗಳಾದ ಡಾ// ಮೈಕಲ್ ಮಿರಾಂದ ಗುಲ್ಬರ್ಗ ಧರ್ಮಕ್ಷೇತ್ರದ ಧರ್ಮಧ್ಯಕ್ಷರು, ಫಾ// ಸಂತೋಷ್ ಬಾಪು ಉಪಾಧ್ಯಕ್ಷರು ಗುಲ್ಬರ್ಗ ಧರ್ಮಕ್ಷೇತ್ರ. ಫಾ// ವಿಕ್ಟರ್ ವಾಸ್ ಆರ್ಬಿಟ್ ಸಂಸ್ಥೆಯ ನಿರ್ದೇಶಕರು. ಸುಮಾರು 64 ಕಾರ್ಯಕರ್ತರು ಹಾಗೂ ಸಿಬ್ಬಂದಿ ವರ್ಗದವರು ಭಾಗವಹಿಸಿದರು.












# “ನವಜೀವನ (ಎ.ಪಿ.ಎಫ್) ಕಾರ್ಯಕ್ರಮ”

## “ಆರ್ಚ್ ಡೈಯಾಸಿಸ್ ಕಾರಿತಾಸ್ ಪ್ರೋಗ್ರಾ. ಇವರ ಸಯುಕ್ತ ಆಶ್ರಯದಲ್ಲಿ ಕೌಶಲ್ಯ ಅಭಿವೃದ್ಧಿ ತರಬೇತಿ”



ಜೂನ್–2025 ಆರ್ಬಿಟ್ ಸಂಸ್ಥೆ, ಆರ್ಚ್ ಡೈಯಾಸಿಸ್ ಕಾರಿತಾಸ್ ಪ್ರೋಗ್ರಾ. ಇವರ ಸಯುಕ್ತ ಆಶ್ರಯದಲ್ಲಿ ಕೌಶಲ್ಯ ಅಭಿವೃದ್ಧಿ ತರಬೇತಿಯನ್ನು ದಿನಾಂಕ 10–02–2025 ರಂದು ಪ್ರಾರಂಭವಾಯಿತು. ಹೊಲಿಗೆಯಂತ್ರ ತರಬೇತಿ ಮತ್ತು ಬ್ಯೂಟಿ ಪಾರ್ಲರ್ ತರಬೇತಿಯನ್ನು ಪಡೆದಿರುವ ಫಲಾನುಭವಿಗಳಿಗೆ, ಪ್ರಮಾಣ ಪತ್ರ ವಿತರಣೆಯ ಕಾರ್ಯಕ್ರಮವನ್ನು ದಿನಾಂಕ 10–06–2025 ಬಾಲ ಯೇಸು ಪುಣ್ಯ ಕ್ಷೇತ್ರ ಭಾಲ್ಕಿಯಲ್ಲಿ ಹಮ್ಮಿಕೊಳ್ಳಲಾಯಿತು. ಈ ತರಬೇತಿಯಲ್ಲಿ ವಂ. ಫಾದರ್. ಡೇವಿಡ್ (ನಿರ್ದೇಶಕರು, ಬಾಲ ಯೇಸು ಪುಣ್ಯಕ್ಷೇತ್ರ ಭಾಲ್ಕಿ) ಕೌಶಲ್ಯಾಭಿವೃದ್ಧಿ ಸಂಘ ಜೀವನವನ್ನು ಉತ್ತೇಜಿಸಿಕೊಳ್ಳುವುದು, ಸ್ವಾವಲಂಬಿಯಾಗಿ ಜೀವನ ನಡೆಸಬೇಕು ಎಂದು ನುಡಿದರು. ವಂ. ಫಾ. ಅಲ್ಬರ್ಟ್ (ಸಹ ನಿರ್ದೇಶಕರು, ಆರ್ಬಿಟ್ ಸಂಸ್ಥೆ, ಹುಮನಾಬಾದ) ಸಂಸ್ಥೆಯು ನಿಮಗೆ ಸಹಾಯ ಮಾಡುತ್ತಿದೆ. ನಿಮ್ಮ ಸಹಕಾರ ನಮಗೆ ಅಗತ್ಯವಾಗುತ್ತದೆ. ಅನೇಕ ಜಾಗೃತಿಗಳನ್ನು ಮೂಡಿಸಲು ಸಂಸ್ಥೆ ಮುಂದು ಬರ್ತಾ ಇದೆ. ನಿಮ್ಮ ಸಹಕಾರ ಅಗತ್ಯ ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಸಂಪನ್ಮೂಲ ವ್ಯಕ್ತಿ ಸಿಸ್ಟರ್. ಕ್ರಿಷ್ಟೇನಾ (ವಲಯ ಯೋಜನೆಯ ವ್ಯವಸ್ಥಾಪಕರು) ಮಹಿಳೆ ಸ್ವಾವಲಂಬಿಯಾಗಿ ಜೀವಿಸುವುದು, ಅನೇಕ ಕೌಶಲ್ಯಗಳ ತರಬೇತಿಯಿಂದ ಪಡೆದ ಜ್ಞಾನವನ್ನು ಇತರಿಗೆ ಜ್ಞಾನವನ್ನು ಹಂಚುವುದು ಮಾತ್ರವಲ್ಲ ನಿಮ್ಮ ಕುಟುಂಬ ಕುಟುಂಬದಲ್ಲಿ ಅನೇಕ ಬಟ್ಟೆಗಳನ್ನು, ತಯಾರಿಸಿ ನೀವು ಮಾರುವುದು, ನೀವು ಇತರರಿಗೆ ಜ್ಯೋತಿ ಆಗಬೇಕು ಆ ಜ್ಯೋತಿ ಜನರ ಮುಂದೆ ಬೆಳಕಾಗಬೇಕು ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಈ ಕಾರ್ಯಕ್ರಮದಲ್ಲಿ ಕೌಶಲ್ಯಾಭಿವೃದ್ಧಿ ಯೋಜನೆಯ ಸಂಯೋಜಕರಾದ ಶ್ರೀ ರವಿ ಕುಮಾರ್, ಶ್ರೀಮತಿ. ಶಾರದಾ (ಬ್ಯೂಟಿ ಪಾರ್ಲರ್ ತರಬೇತಿಯ ಶಿಕ್ಷಕಿ) ಮತ್ತು ಶ್ರೀಮತಿ ಸ್ವರೂಪರಾಣಿ (ಹೊಲಿಗೆ ಯಂತ್ರ ತರಬೇತಿ ಶಿಕ್ಷಕಿ) ಮತ್ತು 24 ಫಲಾನುಭವಿಗಳು ಉಪಸ್ಥಿತರಿದ್ದರು.

## “ಮಾನಸಿಕ ಅಸ್ವಸ್ಥರ ಬಗ್ಗೆ ಅರಿವು”



ದಿನಾಂಕ: 13/06/2025 ರಂದು ಹುಮ್ನಾಬಾದ್ ತಾಲೂಕಿನ ಮಾಣಿಕನಗರ ಗ್ರಾಮದಲ್ಲಿ ಮಧ್ಯಾಹ್ನ ಉದ್ಯೋಗ ಖಾತ್ರೆ ಕೆಲಸ ಮಾಡುವವರಿಗೆ ಮಾನಸಿಕ ಅಸ್ವಸ್ಥರ ಬಗ್ಗೆ ಅರಿವು ಮೂಡಿಸಲಾಯಿತು, ಅಜೀಂ ಪ್ರೇಮ್ ಜಿ ಫೌಂಡೇಶನ್ ಇವರ ಸಂಯುಕ್ತ ಆಶ್ರಯದ ಆರ್ಬಿಟ್ ಸಂಸ್ಥೆಯ ನೇತೃತ್ವದಲ್ಲಿ ಮಾನಸಿಕ ಅಸ್ವಸ್ಥರ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಆರ್ಬಿಟ್ ಸಂಸ್ಥೆಯ ನವ ಜೀವನ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ರವಿ ಸರ್ ಮತ್ತು ಮಹಾದೇವಿ ಇವರು ಒಟ್ಟು 43 ಜನರಿಗೆ ಮಾನಸಿಕ ಅಸ್ವಸ್ಥರ ಬಗ್ಗೆ ಅರಿವು ಮೂಡಿಸಿದರು ಮತ್ತು ಅವರಿಗೆ ಸರ್ಕಾರದಿಂದ ಸಿಗುವ ಸೌಲಭ್ಯಗಳ ಬಗ್ಗೆ ತಿಳಿಸಿದರು. ಮಾನಸಿಕ ಕಾಯಿಲೆ ಒಂದು ಮೆದುಳಿನ ಕಾಯಿಲೆ ಈ ರೋಗಕ್ಕೆ ಔಷಧಿ ಇದೆ, ಪ್ರತಿ ಬುಧವಾರ ಸರ್ಕಾರಿ ಆಸ್ಪತ್ರೆಯಲ್ಲಿ ತಜ್ಞ ಮನೋವೈದ್ಯರು ಬರುತ್ತಾರೆ, ಮಾನಸಿಕ ಕಾಯಿಲೆ ತಪಾಸಣೆ ಮಾಡಿ ಒಂದು ತಿಂಗಳ ಔಷಧಿಯನ್ನು ಕೊಡುತ್ತಾರೆ ಹಾಗಾಗಿ, ನಿಮ್ಮ ಹಳ್ಳಿಯಲ್ಲಿ ಯಾರಾದರೂ ಇದ್ದರೆ ಅವರಿಗೆ ಹೇಳಿರಿ ಎಂದು ತಿಳಿಸಲಾಯಿತು ಮಾನಸಿಕ ಕಾಯಿಲೆ ಲಕ್ಷಣಗಳ, ಕಾರಣ ಇಲ್ಲದೆ ಅಳೋದು ಕಾರಣ ಇಲ್ಲದೆ ನಗುವುದು, ದಾರಿಯಲ್ಲಿ ಹೋಗುವವರನ್ನು ಕಂಡು ಬಯ್ಯೋದು, ಕೈ ತೊಳೆಯುವುದು, ಏಕಾಂಗಿ ಆಗಿರೋದು ಹೀಗೆ ಅವರ ಲಕ್ಷಣಗಳು ಇರುತ್ತವೆ, ಇಂತಹ ಲಕ್ಷಣ ಉಳ್ಳವರು ಕಂಡು ಬಂದಲ್ಲಿ ಅವರಿಗೆ ಆತ್ಮಸ್ಥೈರೆ ತುಂಬುವ ಮೂಲಕ ಸೂಕ್ತ ಮಾರ್ಗದರ್ಶನ ಮಾಡಬೇಕಾಗಿ ವಿನಂತಿಸಲಾಯಿತು.



## “ಪರಸರ ದಿನಾಚರಣೆ ಕಾರ್ಯಕ್ರಮ”



ಚಿಟಗುಪ್ಪಾ ತಾಲೂಕಿನ ಇಟಗಾ ಗ್ರಾಮದ ಮೇರಿ ಪವಾಡ ಮಾತೆ ಚರ್ಚ್ ಅವರಣದಲ್ಲಿ ಆರ್ಬಿಟ್ ಸಂಸ್ಥೆಯ ನವಜೀವನ APF ಕಾರ್ಯಕ್ರಮದ ವತಿಯಿಂದ ದಿನಾಂಕ 29 ಜೂನ್ 2025ರಂದು ಪರಿಸರ ದಿನಾಚರಣೆ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಸ್ಥಳಿಯ ಕೇಂದ್ರದ ನೀರ್ದೇಶಕರು ವಂದನೇಯ ಫಾ. ಸುನೀಲ್ ಮಾನಕರೆರವರು ಬಾಗವಹಿಸಿ ಪರಿಸರದ ಸಂರಕ್ಷಣೆ ನಮ್ಮ ನಿಮ್ಮೆಲ್ಲರ ಹೋಣೆಯೆಂದರು. ಮತ್ತು ಪ್ರತಿಯೋಬ್ಬರು ಮನೆಗೆ ಒಂದಾದರು ಮರ ನೇಟ್ಟು ಮರಗಳನ್ನು ಬೇಳೆಸಲು ಕರೆ ನೀಡಿದರು. ಹಾಗೆ ಸಿಸ್ಟರ. ಅಂಜಿಲಿನ. ಸಂಸ್ಥೆಯ ಕಾರ್ಯಕರ್ತರಾದ ಶ್ರೀ ಹಣಮಂತ ಸಸಿಯನ್ನು ನೆಟ್ಟು ಕಾರ್ಯಕ್ರಮವನ್ನು ಆಚರಿಸಿದರು. ಮತ್ತು ಮರಗಳುನ್ನು ನೆಡಲು ಸ್ಥಳಿಯ ಮಹೀಳೆರಿಗೆ ಸಸಿಗಳು ವಿತರಿಸಿದರು.

## “ವಿಶ್ವ ಪರಿಸರ ದಿನಾಚರಣೆ”



05 ಜೂನ್ 2025ರಂದು ಹುಮನಾಬಾದ್ ತಾಲೂಕಿನ ನಂದಗಾವ್ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ, ನಂದಗವ್ ಗ್ರಾಮ ಪಂಚಾಯಿತಿ ಹಾಗೂ ಆರ್ಬಿಟ್ ಸಂಸ್ಥೆಯ ಸಹಯೋಗದಲ್ಲಿ ವಿಶ್ವ ಪರಿಸರ ದಿನಾಚರಣೆಯನ್ನು ಆಚರಿಸಲಾಯಿತು. ಶಾಲೆಯ ಮಕ್ಕಳಲ್ಲಿ ಪರಿಸರದ ಜಾಗೃತಿ ಮೂಡಿಸುತ್ತಾ, ನಮ್ಮ ಸುತ್ತಮುತ್ತಲಿನ ವಾತಾವರಣವನ್ನು ಪರಿಸರ ಎಂದು ಕರೆಯುತ್ತೇವೆ. ನಾವು ಪರಿಸರವನ್ನು ಶುದ್ಧವಾಗಿ ಇಟ್ಟುಕೊಳ್ಳಲು ಗಿಡಮರಗಳು ಅತ್ಯಂತ ಪ್ರಮುಖ ಕಾರ್ಯನಿರ್ವಹಿಸುತ್ತವೆ. ಹಾಗಾಗಿ ಪ್ರತಿ ವಿದ್ಯಾರ್ಥಿಗಳು ತಮ್ಮ ತಮ್ಮ ಮನೆಯಲ್ಲಿ ತಲಾ ಒಂದಾದರೂ ಸಸಿಗಳನ್ನು ನೆಡುವಂತೆ ಮಾರ್ಗದರ್ಶನವನ್ನು ನೀಡಲಾಯಿತು. ಈ ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯಿತಿ ಸದಸ್ಯರು, ಶಾಲೆಯ ಮುಖ್ಯ ಗುರುಗಳು, ಆರ್ಬಿಟ್ ಸಂಸ್ಥೆಯ ಕಾರ್ಯಕರ್ತ ಶ್ರೀಮತಿ ಪ್ರೀತಿ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

## “ಮಾನಸಿಕ ಅಸ್ವಸ್ಥತೆಯ ಕುರಿತು ಅರಿವು ಕಾರ್ಯಕ್ರಮ”




11 ಜೂನ್ 2025ರಂದು ಹುಮ್ನಾಬಾದ್ ತಾಲೂಕಿನ ಹಳ್ಳಿಖೇಡ್ (ಬಿ) ನಗರದಲ್ಲಿರುವ ಸಮುದಾಯದ ಮಹಿಳೆಯರಿಗೆ ಮಾನಸಿಕ ಅಸ್ವಸ್ಥತೆಯ ಕುರಿತು ಅರಿವು ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಆರ್ಬಿಟ್ ಸಂಸ್ಥೆಯ ನವಜೀವನ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ಡೇವಿಡ್ ಅವರು, ಮಾದಕ ವಸ್ತುಗಳ ಸೇವನೆಯಿಂದ ವ್ಯಕ್ತಿಯು ಹೇಗೆ ಮಾನಸಿಕ ಕಾಯಿಲೆಗೆ ತುತ್ತಾಗುತ್ತಾರೆ, ಮತ್ತು ಮಾದಕ ವಸ್ತುಗಳ ಸೇವನೆಯಿಂದ ಆಗುವ ದುಷ್ಪರಿಣಾಮಗಳ ಕುರಿತು, ಅರಿವು ಮೂಡಿಸಿದರು. ಮಾಹಿತಿಯನ್ನು ಸ್ವೀಕರಿಸಿದ ಮಹಿಳೆಯರು ತಾವು ಸಹ ಬೇರೆಯವರಿಗೆ ಇದರ ಕುರಿತು ಅರಿವು ಮೂಡಿಸುತ್ತೇವೆ ಎಂದು ಪ್ರಮಾಣ ಮಾಡಿದರು. ಈ ಮೂಲಕ ಅವರು ಆರ್ಬಿಟ್ ಸಂಸ್ಥೆಗೂ ಹಾಗೂ ನಿರ್ದೇಶಕರಿಗೂ ಮತ್ತು ಕಾರ್ಯಕರ್ತರಿಗೂ ಧನ್ಯವಾದಗಳು ತಿಳಿಸಿದರು.

## “ಮಾನಸಿಕ ಆರೋಗ್ಯದ ಕುರಿತು ಜಾಗೃತಿ



ಜೂನ್ 17 2025ರಂದು ಚಿಡುಗುಪ್ಪ ತಾಲೂಕಿನ ವಡ್ಡನ್‌ಕೆರಾ ಗ್ರಾಮದ ಅಂಗನವಾಡಿ ಕೇಂದ್ರದಲ್ಲಿ ಸಮುದಾಯದ ಮಹಿಳೆಯರಿಗೆ ಆರ್ಬಿಟ್ ಸಂಸ್ಥೆ ಹುಮನಾಬಾದ್ ಮತ್ತು ಅಜೀಮ್ ಪ್ರೇಮ್ ಜಿ ಫೌಂಡೇಶನ್ ಇವರ ಸಂಯುಕ್ತ ಆಶ್ರಯದಲ್ಲಿ ಮಾನಸಿಕ ಆರೋಗ್ಯದ ಕುರಿತು ಜಾಗೃತಿ ಕಾರ್ಯಕ್ರಮ ನಡೆಸಲಾಯಿತು. ಈ ಕಾರ್ಯಕ್ರಮದಲ್ಲಿ ಆರ್ಬಿಟ್ ಸಂಸ್ಥೆಯ ನವಜೀವನ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ಅರುಣ್ ಕುಮಾರ್ ಅವರು ಮಹಿಳೆಯರಿಗೆ ಮಾನಸಿಕ ಆರೋಗ್ಯ, ಮಾನಸಿಕ ಕಾಯಿಲೆ, ಮಾನಸಿಕ ಆರೋಗ್ಯದ ಕುರಿತು ವಿವರವಾಗಿ ತಿಳಿ ಹೇಳಿದರು, ಈ ಕಾಯಿಲೆ ಬಂದಾಗ ಮೂಢನಂಬಿಕೆಗೆ ಬಲಿಯಾಗದೆ ಸೂಕ್ತ ವೈಜ್ಞಾನಿಕ ಚಿಕಿತ್ಸೆಯನ್ನು ಪಡೆದುಕೊಳಬೇಕು. ಇದು ಒಂದು ಮೆದುಳಿನ ಕಾಯಿಲೆಯಾಗಿದೆ ಎಂದು ಅರಿವು ಮೂಡಿಸಲಾಯಿತು. ಈ ಕಾಯಿಲೆ ಬಂದರೆ ಸರ್ಕಾರಿ ಆಸ್ಪತ್ರೆಯಲ್ಲಿ ಉಚಿತ ತಪಾಸಣೆ ಮತ್ತು ಮಾತ್ರೆಗಳು ಸಿಗುತ್ತವೆ ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ತಿಳಿಸಲಾಯಿತು. ಈ ಕಾರ್ಯಕ್ರಮದಲ್ಲಿ ಒಟ್ಟು 20 ಮಹಿಳೆಯರು ಭಾಗವಹಿಸಿದರು.

## “ಮಾನಸಿಕ ರೋಗದ ಕುರಿತು ನರೇಗಾ ಕೂಲಿ ಕಾರ್ಮಿಕರಿಗೆ ಅರಿವು”



02 ಜೂನ್ 2025ರಂದು ಹುಮ್ನಾಬಾದ್ ತಾಲೂಕಿನ ದುಮ್ಮನ್ಸೂರ್ ತಾಂಡದ ನರೇಗಾ ಕೂಲಿ ಕಾರ್ಮಿಕರಿಗೆ ಆರ್ಬಿಟ್ ಸಂಸ್ಥೆ ಹಾಗೂ ಅಜೀಮ್ ಪ್ರೇಮ್ ಜೀ ಫೌಂಡೇಶನ್ ಇವರ ಸಯುಕ್ತ ಆಶಯದಲ್ಲಿ ಮಾನಸಿಕ ರೋಗದ ಕುರಿತು ಅರಿವು ಮೂಡಿಸಲಾಯಿತು. ಸಮುದಾಯಗಳಲ್ಲಿ ಯಾರಾದರೂ ಮಾನಸಿಕ ಅಸ್ವಸ್ಥರು ಕಂಡುಬಂದರೆ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರ ಗಮನಕ್ಕೆ ಮತ್ತು ಸಮುದಾಯಗಳಲ್ಲಿರುವ ಆಶಾ ಕಾರ್ಯಕರ್ತರ ಗಮನಕ್ಕೆ ತರಬೇಕು. ಆ ವ್ಯಕ್ತಿಯನ್ನು ಆರ್ಬಿಟ್ ಸಂಸ್ಥೆಯ ಮೂಲಕ ಆಪ್ತಸಮಲೋಚನೆಗೆ ಒಳಪಡಿಸಿ ಮನೋವೈದ್ಯರ ಮೂಲಕ ಚಿಕಿತ್ಸೆ ನೀಡಲು ಸಹಕಾರಿಯಾಗುತ್ತದೆ ಎಂದು ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಾದ ಶ್ರೀ ಕಂಠಿ ಯವರು ಮಾಹಿತಿ ನೀಡಿದರು.

# "ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮ"

## "ಬೇಬಿ ಸ್ಕ್ರೀನಿಂಗ್ ಹಾಗೂ ಮನೆ ಆಧಾರಿತ ಚಟುವಟಿಕೆ"



ಜೂನ್ 19 2025ರಂದು ಬಸವಕಲ್ಯಾಣ್ ತಾಲೂಕಿನ ತಡೋಳ ಗ್ರಾಮದ ಅಂಗನವಾಡಿ ಕೇಂದ್ರದಲ್ಲಿ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತೆ ಶ್ರೀಮತಿ ಕವಿತಾ ರವರು ಅಂಗನವಾಡಿ ಕಾರ್ಯಕರ್ತೆ ಶ್ರೀಮತಿ ಲಕ್ಷ್ಮಿ ಅವರ ಒಪ್ಪಿಗೆಯ ಮುಖಾಂತರ 30 ಮಕ್ಕಳಿಗೆ ತೂಕ, ಎತ್ತರ, ತೋಳಿನ ಸುತ್ತಳತೆ, ಎದೆಯ ಸುತ್ತಳತೆ ಮಾಡಲಾಯಿತು. ಬೆಳವಣಿಗೆಯಿಂದ ಕುಂಠಿತ ಹೊಂದಿದ 5 ಮಕ್ಕಳಿಗೆ ಅಂಗನವಾಡಿ ಕೇಂದ್ರದಲ್ಲಿ ಬುದ್ಧಿಮಾಂದ್ಯತೆ ಹೊಂದಿರುವ ಮಕ್ಕಳಿಗೆ, ಕೈಯಲ್ಲಿ ಶಕ್ತಿ ಇರದ ಮಗುವಿಗೆ ಬಣ್ಣಬಣ್ಣದ ವಸ್ತುಗಳ ಹೆಸರು ಹೇಳಿಸುವುದು, ಬರೆಸುವುದು, ಆಟ ಆಡಿಸುವುದು, ಕೈಯಲ್ಲಿ ವಸ್ತುಗಳನ್ನು ಹಿಡಿಯುದು ಎಸೆಯುವ, AFO ಕಾಲಲ್ಲಿ ಹಾಕಿ ನಿಲ್ಲಿಸುವ ಚಟುವಟಿಕೆ ಮಾಡಿಸಲಾಯಿತು. ನಂತರ ಎರಡು ಮಕ್ಕಳಿಗೆ ಮನೆ ಆಧಾರಿತ ಚಟುವಟಿಕೆಯನ್ನು ನಡೆಯುವುದಕ್ಕೆ ಕುಳಿತುಕೊಳ್ಳುವುದಕ್ಕೆ ಬರದೇ ಇರುವ ಮಕ್ಕಳಿಗೆ ಗೋಡೆಯ ಸಹಾಯದಿಂದ ಕೂರಿಸುವುದು, ನಿಲ್ಲಿಸುವುದು ಶಬ್ದ ಗುರುತಿಸುವಂತಹದು, ಬಣ್ಣಬಣ್ಣದ ಲೈಟ್ ಮುಖಾಂತರ ಚಟುವಟಿಕೆ ಮಾಡಿಸಲಾಯಿತು.

## "ಬೆಳವಣಿಗೆಯಲ್ಲಿ ಕುಂಠಿತ ಹೊಂದಿರುವ ಮಕ್ಕಳಿಗೆ ಕೇಂದ್ರ ಆಧಾರಿತ ಚಟುವಟಿಕೆ"



ಜೂನ್ 23 2025ರಂದು ಆರ್ಬಿಟ್ ಸಂಸ್ಥೆಯ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಕೇಂದ್ರದಲ್ಲಿ ಬೆಳವಣಿಗೆಯಲ್ಲಿ ಕುಂಠಿತ ಹೊಂದಿರುವ ಮಕ್ಕಳಿಗೆ ಕೇಂದ್ರ ಆಧಾರಿತ ಚಟುವಟಿಕೆಗಳನ್ನು ಮಾಡಿಸಲಾಯಿತು. ಮಕ್ಕಳಿಗೆ ನೆಲದ ಮೇಲೆ ಯಾವುದೇ ಆಧಾರವಿಲ್ಲದೆ ಕುಳಿತುಕೊಳ್ಳುವ ಚಟುವಟಿಕೆ, ಎದ್ದುನಿಲ್ಲುವ ಚಟುವಟಿಕೆ, ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಆಧಾರವನ್ನು ಹಿಡಿದುಕೊಂಡು ಹೋಗುವುದು ಹೇಗೆ ಎಂಬುವುದನ್ನು ಪ್ರಯೋಗಾತ್ಮಕವಾಗಿ ಮಾಡಿ ತೋರಿಸಲಾಯಿತು. ಜೊತೆಗೆ ಮಕ್ಕಳಿಗೆ ಶಬ್ದಗಳನ್ನು ಗುರುತಿಸುವ ಚಟುವಟಿಕೆ ಬಣ್ಣಗಳನ್ನು ಗುರುತಿಸುವ ಚಟುವಟಿಕೆ ಕುರಿತು ಮಾಹಿತಿಯನ್ನು ನೀಡಲಾಯಿತು. ಪೋಷಕರ ಮನೆಯಲ್ಲಿ ದಿನನಿತ್ಯ ಈ ರೀತಿ ಚಟುವಟಿಕೆಗಳ ಮಾಡುವುದರಿಂದ ಮಕ್ಕಳಲ್ಲಿ ಚೈತನ್ಯ ಕಂಡುಕೊಳ್ಳಲು ಸಾಧ್ಯವಾಗುತ್ತದೆ ಎಂದು ತಿಳಿಸಿ ಹೇಳಲಾಯಿತು. ಮಕ್ಕಳಿಗೆ ದಿನನಿತ್ಯ ಸ್ವಚ್ಛತೆ ಇರುವಂತೆ ನೋಡಿಕೊಳ್ಳುವುದು, ಅವರ ಆಹಾರ ಕ್ರಮದ ಬಗ್ಗೆ ದಿನನಿತ್ಯ ಗಮನವನ್ನು ಹರಿಸುವಂತದ್ದು ಎಂದು ಮಾಹಿತಿಯನ್ನು ನೀಡಲಾಯಿತು.

## "ಪೋಷಕರ ಸಭೆ ಹಾಗೂ ಪೋಷಕರ ಒಕ್ಕೂಟ ಕಾರ್ಯಕ್ರಮ"




ಜೂನ್ 23 2025ರಂದು ಹುಮನಾಬಾದ ವಲಯದ ಆರ್ಬಿಟ್ ಸಭಾಂಗಣದಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮದ ಅಡಿಯಲ್ಲಿ ಪೋಷಕರ ಸಭೆ ಹಾಗೂ ಪೋಷಕರ ಒಕ್ಕೂಟ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ಅಧ್ಯಕ್ಷ ಸ್ಥಾನವನ್ನು ಸಂಸ್ಥೆಯ ಸಹ ನಿರ್ದೇಶಕರಾದ ಒಂದನೇ ಫಾದರ್ ಆಲ್ಬರ್ಟ್ ರವರು ವಹಿಸಿದರು. ಕಾರ್ಯಕ್ರಮವನ್ನು ಉದ್ದೇಶಿಸಿ ಮಕ್ಕಳ ಯಾವ ರೀತಿ ನೋಡಿಕೊಳ್ಳಬೇಕು ಮಕ್ಕಳಿಗೆ ಹೆಚ್ಚಿನ ಪ್ರೀತಿ ಕೊಡಬೇಕು ಕೀಳಾಗಿ ನೋಡಬೇಡಿ ತರಬೇತಿ ಪಡೆದುಕೊಂಡು ಮಕ್ಕಳಿಗೆ ಚಟುವಟಿಕೆ ಮಾಡುವುದರ ಮುಖಾಂತರ ಬದಲಾವಣೆ ತರಬೇಕೆಂದು ತಿಳಿಸಿದರು. ಈ ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಯಾದ ಶ್ರೀ ಸದಾನಂದ ಸ್ವಾಮಿ ರವರು ಪೋಷಕರ ಸಭೆಯ ಒಕ್ಕೂಟದ ರಚನೆ ಉದ್ದೇಶ ಮತ್ತು ಗುರಿಯ ಬಗ್ಗೆ ಹೇಳುತ್ತಾ, ಬೆಳವಣಿಗೆಯಲ್ಲಿ ಕುಂಟಿತ ಹೊಂದಿರುವ ಮಕ್ಕಳಿಗೆ ಸರ್ಕಾರದಿಂದ ಸಿಗುವ ಹಕ್ಕುಗಳ ಬಗ್ಗೆ ತಿಳಿಸಿದರು. ಈ ಸಭೆಯಲ್ಲಿ ಸುಮಾರು 20 ಜನ ಪೋಷಕರು ಇದರ ಸದುಪಯೋಗ ಪಡೆದುಕೊಂಡರು. ಇಂದಿನ ಸಭೆಯ ಕಾರ್ಯಕ್ರಮವನ್ನು ಶ್ರೀಮತಿ ಮಮತಾ ರವರು ವಂದನ ಅರ್ಪಣೆಯೊಂದಿಗೆ ಮುಕ್ತಾಯಗೊಳಿಸಲಾಯಿತು.



# ಮಹಿಳಾ ಸಬಲೀಕರಣ ಕಾರ್ಯಕ್ರಮ”

## “ಸರಕಾರದಿಂದ ಹಾಗೂ ಇನ್ನಿತರ ಸಂಸ್ಥೆಂಯಿಂದ ಸಹಾಯವನ್ನು ಪಡೆದು ಆರ್ಥಿಕ ಪರಿಸ್ಥಿತಿ ಸುಧಾರಣೆ”



ಮವಿತಾ ಗಂಡ ಪ್ರಭು ಉಡಬಾಳ ಗ್ರಾಮದ ನಿವಾಸಿಯಾಗಿದ್ದಾರೆ. ಮಮಿತಾ ಅವರು ರಕ್ಷಣಾ ಸಂಘದಲ್ಲಿ ಸೇರಿಕೊಂಡು ಮೂರು ವರ್ಷವಾಯಿತು. ಮೊದಲು ಸರಕಾರದಿಂದ ಹಾಗೂ ಯಾವುದೆ ಇನ್ನಿತರ ಸಂಸ್ಥೆಂಯಿಂದ ಸಹಾಯವನ್ನು ಪಡೆದುಕೋಳ್ಳುವ ಯಾವುದೇ ಮಾಹಿತಿ ಇರಲಿಲ್ಲಾ. ರಕ್ಷಣಾ ಸಂಘಕ್ಕೆ ಸೇರಿದ ನಂತರ ಸರಕಾರದಿಂದ ಹಾಗೂ ಇನ್ನಿತರ ಸಂಸ್ಥೆಂಯಿಂದ ಹಲವಾರು ಮಾಹಿತಿಗಳನ್ನು ಪಡೆದುಕೊಂಡು ಡಿಸಿಸಿ ಬ್ಯಾಂಕ್ ಹಾಗೂ ಸಮೃದ್ಧಿ ಯೋಜನೆಯಿಂದ ಲೋನ್ ತೆಗೆದುಕೊಂಡು ಆಕಳನ್ನು ಖರೀದಿ ಮಾಡಿದ್ದೇವೆ. ಕೂಲಿ ಕೆಲಸ ಮಾಡುವುದರೊಂದಿಗೆ ಆಕಳನ್ನು ಸಾಕುತ್ತಿದ್ದೇನೆ. ನನಗೆ ಮೂರು ಜನ ಮಕ್ಕಳಿದ್ದಾರೆ ಮಕ್ಕಳು ಶಾಲೆಗೆ ಹೋಗುತ್ತಾರೆ. ಆರ್ಥಿಕ ಪರಿಸ್ಥಿತಿ ಸುಧಾರಿಸಿಕೊಳ್ಳಲು ಸಂಘಕ್ಕೆ ಸೇರಿ ಒಂದು ನಾಯಕತ್ವ ಬಂದಿದೆ. ಮನೆಯಲ್ಲಿ ಎಲ್ಲರೂ ಸಂತೋಷವಾಗಿದ್ದೇವೆ. ಸಂಘ ಮಾಡಲು ಅವಕಾಶ ನೀಡಿದ ಆರ್ಬಿಟ್ ಸಂಸ್ಥೆಗೆ ಧನ್ಯವಾದಗಳು ಸಲ್ಲಿಸುತ್ತೇನೆ ಎಂದು ಹೇಳಿದ್ದಾರೆ.

## “ವಿಶ್ವ ಪರಿಸರ ದಿನಾಚರಣೆ” ಶುದ್ಧ ಗಾಳಿ, ನೀರು ಸುತ್ತಮುತ್ತಲಿನ ವಾತಾವರಣ ಶುದ್ಧವಾಗಿಟ್ಟುಕೊಳ್ಳಿ”



ಹುಮ್ನಾಬಾದ್ ತಾಲೂಕಿನ ಕಪ್ಪರಗಾವ್ ಗ್ರಾಮದಲ್ಲಿ 05 ಜೂನ್ 2025ರಂದು ಆರ್ಬಿಟ್ ಸಂಸ್ಥೆ ಮಹಿಳಾ ಸಬಲೀಕರಣ ಯೋಜನೆಯ ಅಡಿಯಲ್ಲಿ ಬರುವ ಗಾಂಧಿ ಮಹಾಸಂಗದ ಸದಸ್ಯರು ವಿಶ್ವ ಪರಿಸರ ದಿನಾಚರಣೆಯನ್ನು ಹಮ್ಮಿಕೊಳ್ಳಲಾಗಿತ್ತು. ಯೋಜನೆಯ ಸಂಯೋಜಕರಾದ ಶ್ರೀಮತಿ ನಿರ್ಮಲ ರವರು ಪ್ರತಿಯೊಂದು ಹಬ್ಬಗಳು ಮಾಡಬೇಕಾದರೆ ಅದಕ್ಕೆ ಆದಂತಹ ವಿಶೇಷತೆ ಇರುತ್ತದೆ ಎಂದು ಉದಾಹರಣೆ ಮೂಲಕ ಪರಿಸರ ದಿನಾಚರಣೆಯ ಮಹತ್ವದ ಕುರಿತು ಸದಸ್ಯರಿಗೆ ತಿಳಿಸಿದರು. ಮನುಷ್ಯ ಜೀವಿಸಬೇಕಾದರೆ ಪರಿಸರವು ಅಷ್ಟೇ ವಿಶೇಷವಾಗಿದೆ. ವಯಕ್ತಿಕ ಸ್ವಚ್ಛತೆ, ಮನೆ ಸುತ್ತಮುತ್ತಲಿನ ಸ್ವಚ್ಛತೆಯನ್ನು ಕಾಪಾಡಿಕೊಳ್ಳುವುದರೊಂದಿಗೆ ನಮ್ಮ ಜೀವನವನ್ನು ಸಾಧಿಸಲು ಮುಂದಾಗಬೇಕೆಂದು ವಿವರಣೆಯನ್ನು ನೀಡಿದರು. ಪ್ರಾಥಮಿಕ ಆರೋಗ್ಯ ಕೇಂದ್ರದ ಕಿರಿಯ ಆರೋಗ್ಯ ಕಾರ್ಯಕರ್ತೆಯಾದ ಶ್ರೀಮತಿ ಕುಸುಮಾವತಿಯವರು ಮನೆ ಅಂಗಳದಲ್ಲಿ ಸಣ್ಣದಾಗಲಿ ದೊಡ್ಡದಾಗಲಿ ಗಿಡವನ್ನು ನಟಿ ಶುದ್ಧವಾದ ಗಾಳಿಯನ್ನು ಪಡೆದುಕೊಳ್ಳಬೇಕು. ಶುದ್ಧ ಗಾಳಿ ನೀರು ಸುತ್ತಮುತ್ತಲಿನ ವಾತಾವರಣ ಶುದ್ಧವಾಗಿಟ್ಟುಕೊಂಡರೆ ಪ್ರತಿಶತ 99% ಆರೋಗ್ಯ ವಂತರಾಗಿ ಬಾಳಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಮಹಿಳಾ ಸಬಲೀಕರಣ ಯೋಜನೆ ಕಾರ್ಯಕರ್ತೆರಾದ ಶ್ರೀಮತಿ ಸವಿತಾ ಜನಶಕ್ತಿ ತಾಲೂಕ ಒಕ್ಕೂಟದ ಸದಸ್ಯರಾದ ಶ್ರೀಮತಿ ಗಂಗಮ್ಮ, ಶ್ರೀಮತಿ ಮವಿತಾ ಹಾಗೂ ಮಹಾಸಂಗದ ಪದಾಧಿಕಾರಿಗಳು, ಅಂಗನವಾಡಿ ಕಾರ್ಯಕರ್ತೆರಾದ ಶ್ರೀಮತಿ ಕವಿತ, ಶ್ರೀಮತಿ ಲಲಿತ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರದಿಂದ ಎಂಡಿ ಜಿಯಾ ಓದಿನ್ ಭಾಗವಹಿಸಿದ್ದರು.

## “ಲಿಂಗ ಸಮಾನತೆಯ ಕುರಿತು ಮಾಹಿತಿ ಕಾರ್ಯಾಗಾರ”



9 ಜೂನ್ 2025ರಂದು ಚಟ್ಟಗುಪ್ಪ ತಾಲೂಕಿನ ವಡ್ಡನಕೇರಾ ಗ್ರಾಮದಲ್ಲಿ ಶ್ರೀಮತಿ ಅಮಿತಾ ಮಹಿಳಾ ಸಬಲೀಕರಣ ಯೋಜನೆ ಕಾರ್ಯಕರ್ತೆ “ಲಿಂಗ ಸಮಾನತೆಯ” ಕುರಿತು ಮಾಹಿತಿ ಕಾರ್ಯಾಗಾರವನ್ನು ಹಮ್ಮಿಕೊಂಡಿದ್ದರು. ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದಂತಹ ಶ್ರೀಮತಿ ಭಾಗ್ಯಶ್ರೀ ಲಿಂಗಸೂಕ್ಷ್ಮತೆ ಪ್ರೇರಣ ತಂಡದ ಸದಸ್ಯರು. ಲಿಂಗ ಮತ್ತು ಲಿಂಗತ್ವಕಿರುವ ವ್ಯತ್ಯಾಸದ ಕುರಿತು ಮಾತನಾಡಿದ್ದರು. ಲಿಂಗ ಎಂದರೆ ಇದು ಪ್ರಕೃತಿದತ್ತವಾಗಿ ಬಂದಿರುವಂತದು. ಲಿಂಗತ್ವ ಎಂದರೆ ಸಮಾಜ ನಮ್ಮ ಮೇಲೆ ಹೇರಳ ಪಟ್ಟ ಪಾತ್ರ ಮತ್ತು ಜವಾಬ್ದಾರಿಗಳು. ಇದು ನಾವು ಯಾವ ಸಂದರ್ಭದಲ್ಲಿ ಬದಲಾಯಿಸಬಹುದು. ಲಿಂಗ ಸಮಾನತೆ ಮೊದಲು ನಮ್ಮ ಕುಟುಂಬದಿಂದಲೇ ಪ್ರಾರಂಭವಾಗಬೇಕು. ಅಂದಾಗ ಮಾತ್ರ ಗ್ರಾಮದಲ್ಲಿ ಸಮಾಜದಲ್ಲಿ ಬದಲಾವಣೆ ತರಲು ಸಾಧ್ಯವಾಗುತ್ತದೆ. ಮಹಿಳೆಯರು ದಿನನಿತ್ಯ ಕೆಲಸದಲ್ಲೇ ಕಾಲ ಕಳೆಯುತ್ತೇವೆ. ಆದರೆ ನಮ್ಮ ಆರೋಗ್ಯದಕಡೆ ಗಮನ ಕೊಡುವುದಿಲ್ಲ. ನಮ್ಮ ಆರೋಗ್ಯದ ಕಡೆ ಹಾಗೂ ಗಂಡು ಮತ್ತು ಹೆಣ್ಣು ಮಕ್ಕಳಿಗೆ ಒಂದೇ ತರಹದ ಉನ್ನತ ಶಿಕ್ಷಣ ಕೊಡಲಿಕೆ ಮುಂದಾಗಣ ಎಂದು ತಿಳಿಸಿದರು. ಅವರ ಕುಟುಂಬದಲ್ಲಿ ಆದ ಬದಲಾವಣೆಯ ಕುರಿತು ಅನುಭವವನ್ನು ಹಂಚಿಕೊಳ್ಳುವುದರ ಮೂಲಕ ಎಲ್ಲಾ ಮಹಿಳೆಯರಿಗೆ ಮನವರಿಕೆ ಮಾಡಿದರು.

## “ಪರಿಸರ ಸಂರಕ್ಷಣೆಯ ಮಹತ್ವದ ಕುರಿತು ಅರಿವು”



10 ಜೂನ್ 2025ರಂದು ಹುಮ್ನಾಬಾದ್ ತಾಲೂಕಿನ ದುಮ್ಮನಸೂರು ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆ ಮಹಿಳಾ ಸಬಲೀಕರಣ ಯೋಜನೆ ಅಡಿಯಲ್ಲಿ ಬರುವ ಸಂಜನಾ ಮಹಾಸಂಗದ ಮಹಿಳೆಯರಿಗೆ ಮಹಿಳಾ ಸಬಲೀಕರಣ ಯೋಜನೆ ಕಾರ್ಯಕರ್ತೆರಾದ ಶ್ರೀಮತಿ ಸವಿತಾ ರವರು ಪರಿಸರ ಸಂರಕ್ಷಣೆಯ ಮಹತ್ವದ ಕುರಿತು ಅರಿವಿನ ಹಾಡಿನ ಮೂಲಕ ಸದಸ್ಯರಿಗೆ ಮನವರಿಕೆ ಮಾಡಿಸಲಾಯಿತು. ಪರಿಸರ ರಕ್ಷಣೆಯು ಮಾಡುವುದು ನಮ್ಮೆಲ್ಲರ ಹೊಣೆಯಾಗಿದೆ. ಆದ್ದರಿಂದ ನಾವು ಆರೋಗ್ಯವಂತರಾಗಿ ಇರಬೇಕಾದರೆ, ಪರಿಸರ ಕಾಪಾಡುವುದು ಬಹಳ ಮುಖ್ಯವಾಗಿದೆ. ಮನೆಗೊಂದು ಗಿಡ ಬೆಳೆಸಿ ಶುದ್ಧವಾದ ಗಾಳಿ ಸೇವನೆ ಮಾಡುವುದರಿಂದ ನಮ್ಮಲ್ಲಿರುವ ಇಂಗಾಲದ ಡೈ ಆಕ್ಸೈಡ್‌ಅನ್ನು ತೆಗೆದುಕೊಂಡು ಆಮ್ಲಜನಕವನ್ನು ನಮಗೆ ನೀಡುತ್ತದೆ. ಆದ್ದರಿಂದ ನಮ್ಮ ಮನೆ ಸುತ್ತಮುತ್ತಲು ಸ್ವಚ್ಛತೆಯನ್ನು ಇಟ್ಟುಕೊಳ್ಳಬೇಕು ಎಂದು ತಿಳಿಸಲಾಯಿತು. 10 ಮಹಿಳೆಯರು ಇದರ ಮಹತ್ವವನ್ನು ತಿಳಿದುಕೊಂಡು ಪರಿಸರ ರಕ್ಷಣೆ ಮಾಡುವಂತಹ ಹೊಣೆಯು ನಮ್ಮದಾಗಿದೆ ಇದು ನಮ್ಮ ಕೈಯಲ್ಲೇ ಇದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

## “ನವಜೀವನ (ಎಲ್.ಎಲ್. ಎಲ್. ಎಫ್) ಕಾರ್ಯಕ್ರಮ”

### “ಮಾನಸಿಕ ಆರೋಗ್ಯ ಜಾಗೃತಿ ಕಾರ್ಯಕ್ರಮ”



23 ಜೂನ್ 2025ರಂದು ಭಾಲ್ಕಿ ತಾಲೂಕಿ ಹಾಲಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ನವಜೀವನ ಲಿವ್. ಲವ್. ಲಾಫ್ ಫೌಂಡೇಶನ್ ಇವರ ಸಂಯುಕ್ತ ಆಶ್ರಯದಲ್ಲಿ, ಮಾನಸಿಕ ಆರೋಗ್ಯ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತ್ತು. ಈ ಕಾರ್ಯಕ್ರಮದಲ್ಲಿ ಶ್ರೀ ಕುಮಾರ್ ರವರು ಮಾತನಾಡುತ್ತಾ ಮಕ್ಕಳಿಗೆ ಆಗುವ ಮಾನಸಿಕ ಖಿನ್ನತೆಯ ಹಾಗೂ ಒತ್ತಡದ ಬಗ್ಗೆ ತಿಳಿಸಿದರು. ಮಕ್ಕಳಿಗೆ ಮಾಹಿತಿ ನೀಡುತ್ತಾ ಅವರ ಕುಟುಂಬದಲ್ಲಿ ಇವರು ತಮ್ಮ ಹಿರಿಯರಿಗೆ ಹೇಗೆ ಒತ್ತಡ ಹೇರಬಹುದು ಎಂಬುದರ ಬಗ್ಗೆ ತಿಳಿಸಲಾಯಿತು. ಶಿಕ್ಷಕರು ಹೇಗೆ ಒತ್ತಡಕ್ಕೆ ಒಳಗಾಗಬಹುದು ಹಾಗೂ ಅದನ್ನು ಹೇಗೆ ಸರಿಪಡಿಸಿ ನಮ್ಮ ಆರೋಗ್ಯವನ್ನು ಕಾಪಾಡಬಹುದು ಎಂಬುದರ ಮಾಹಿತಿ ನೀಡಲಾಯಿತು. ಕೆಲವು ನೈಜ ವ್ಯಕ್ತಿಗಳ ಉದಾಹರಣೆ ನೀಡುತ್ತಾ ಮಾಹಿತಿ ಕಾರ್ಯಕ್ರಮವನ್ನು ಮುಕ್ತಯಗೊಳಿಸಲಾಯಿತು. ತದನಂತರ ಶಿಕ್ಷಕರ ಮತ್ತು ಮಕ್ಕಳ ಕೆಲವು ಪ್ರಶ್ನೆಗಳಿಗೆ ಉತ್ತರ ನೀಡುತ್ತಾ ಕಾರ್ಯಕ್ರಮವು ಯಶಸ್ವಿ ಕಂಡಿತು. ಇದರ ಜೊತೆಗೆ ಪ್ರತಿ ತಿಂಗಳು ಎರಡನೇ ಮಂಗಳವಾರ ಭಾಲ್ಕಿಯ ಸರಕಾರಿ ಆಸ್ಪತ್ರೆಯಲ್ಲಿ DMHP ಕ್ಯಾಂಪ್ ಇರುವುದರ ಮಾಹಿತಿ ಹೇಳಲಾಯಿತು. ಈ ಮಾನಸಿಕ ಆರೋಗ್ಯ ಜಾಗೃತಿ ಕಾರ್ಯಕ್ರಮದಲ್ಲಿ ಶಾಲೆಯ ಮಕ್ಕಳು ಹಾಗೂ ಶಿಕ್ಷಕರು ಸೇರಿ ಒಟ್ಟು 38 ಜನ ಭಾಗವಹಿಸಿದರು.

### “ಅಂಗನವಾಡಿ ಕಾರ್ಯಕರ್ತೆಯರ ತರಬೇತಿ”



14 ಜೂನ್ 2025ರಂದು ಬೀದರ್ ತಾಲೂಕಿನ ನವಜೀವನ ಲಿವ್.ಲವ್.ಲಾಫ್ ಕಾರ್ಯಕ್ರಮದ ಶ್ರೀ ಅರುಣರವರು ಅಂಗನವಾಡಿ ಕಾರ್ಯಕರ್ತೆಯರ ತರಬೇತಿಯನ್ನು ಹಮ್ಮಿಕೊಳ್ಳಲಾಯಿತು. ಈ ತರಬೇತಿಯಲ್ಲಿ ಬೀದರ್ ತಾಲೂಕಿನ ಸಿ.ಬಿ.ಆರ್ ಆಗಿರುವ ಶ್ರೀ ಅನಂದ್ ರವರು ಮತ್ತು ಆಪ್ತ ಸಮಾಲೋಚನೆ ಮಾಡುವ ಶ್ರೀಮತಿ ರೂಪಾಲಿ, ಕಾರ್ಯಕರ್ತರಾದ ಶ್ರೀ. ಅರುಣ್ ಅವರು ಭಾಗವಹಿಸಿದ್ದರು. ಶ್ರೀ ಅನಂದ್ ರವರು ತರಬೇತಿಯನ್ನು ಮುಂದು ನಡೆಸುತ್ತಾ ಮಾನಸಿಕ ಅಸ್ವಸ್ಥತೆಯ ಬಗ್ಗೆ ತರಬೇತಿ ನೀಡಲಾಯಿತು. ಈ ಅಸ್ವಸ್ಥತೆಯೂ ಒಂದು ಮೆದುಳಿನ ಕಾಯಿಲೆಯಾಗಿದೆ. ಪ್ರತಿಯೊಬ್ಬ ಮನುಷ್ಯನಿಗೆ ಕೆಲಸದಲ್ಲಿ ಒತ್ತಡ ಇದ್ದೇ ಇರುತ್ತದೆ. ಅತಿಯಾದ ಕೆಲಸದಿಂದ ಮನುಷ್ಯನಿಗೆ ಆತಂಕ, ಭಯ, ಖಿನ್ನತೆಯ ಅಂತಹ ಲಕ್ಷಣಗಳು ಕಂಡುಬರುತ್ತವೆ. ಇಂತಹ ವ್ಯಕ್ತಿಗಳನ್ನು ಕಂಡುಬದ್ದಲ್ಲಿ ಮನೋವೈದ್ಯರನ್ನು ಸಂಪರ್ಕಿಸಿ ಸೂಕ್ತ ಚಿಕಿತ್ಸೆಯನ್ನು ತೆಗೆದುಕೊಳ್ಳುವ ಹಾಗೆ ನೋಡಿಕೊಳ್ಳುವುದು ನಮ್ಮ ಕರ್ತವ್ಯವಾಗಿದೆ ಎಂದು ಚಿಕಿತ್ಸೆ ಬಗ್ಗೆ ಅರಿವು ಮೂಡಿಸಲಾಯಿತು. ಈ ಸಭೆಯಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಸೇರಿ ಒಟ್ಟು 33 ಜನ ಭಾಗವಹಿಸಿದ್ದರು.

## “ಸುರಕ್ಷಾ ಮಾನಸಿಕ ಅಸಸ್ಥರ ಪಾಲಕರ ಸಭೆ”



2 ಜೂನ್ 2025ರಂದು ಬೀದರ್ ತಾಲೂಕಿನ ಕಮಠಾಣ ಗ್ರಾಮದಲ್ಲಿ ಸುರಕ್ಷಾ ಮಾನಸಿಕ ಅಸಸ್ಥರ ಪಾಲಕರ ಸಭೆಯನ್ನು ನಡೆಸಲಾಯಿತು. ಈ ಸಭೆಯಲ್ಲಿ ಮಾನಸಿಕ ಅಸ್ವಸ್ಥರಿಗೆ ಸರಿಯಾದ ಸಮಯಕ್ಕೆ ಮಾತ್ರೆಗಳನ್ನು ತೆಗೆದುಕೊಳ್ಳಬೇಕೆಂದು ತಿಳಿಸಲಾಯಿತು. ಹಾಗೂ ಸರ್ಕಾರದಿಂದ ಸಿಗುವ ಸೌಲಭ್ಯಗಳಾದ udid ಕಾರ್ಡ್ ಮತ್ತು ಪೆನ್ಷನ್ ಕುರಿತು ಎಲ್ಲಾ ಫಲಾನುಭವಿಗಳಿಗೆ ಸರಿಯಾಗಿ ಆರೈಕೆ ಮಾಡುವಂತೆ ಆರ್ಬಿಟ್ ಸಂಸ್ಥೆಯ ನವಜೀವನ ಕಾರ್ಯಕ್ರಮದ ಕಾರ್ಯಕರ್ತರಾದ ಕು. ಅಭಿಷೇಕ್ ರವರು ಸಂಪೂರ್ಣ ಮಾಹಿತಿ ನೀಡಲಾಯಿತು. ಈ ಕಾರ್ಯಕ್ರಮದಲ್ಲಿ ಒಟ್ಟು 10 ಜನರು ಭಾಗ ವಹಿಸಿದರು.

## “ವಿಶೇಷ ಚೇತನರ ಸಂಘವನ್ನು ರಚನೆ”



18 ಜೂನ್ 2025ರಂದು ಬೀದರ್ ತಾಲೂಕಿನ ಮಮದಾಪುರ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ನವಜೀವನ ಲಿವ್.ಲವ್.ಲಾಫ್ ಫೌಂಡೇಶನ್ ಕಾರ್ಯಕ್ರಮದ ಸಂಯುಕ್ತ ಆಶ್ರಯದಲ್ಲಿ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಾದ ಶ್ರೀ ಆನಂದ್ ರವರು ವಿಶೇಷ ಚೇತನರ ಸಂಘವನ್ನು ರಚಿಸಿ ಸಂಘವನ್ನು "ಡಾ.ಬಿ.ಆರ್ ಅಂಬೇಡ್ಕರ್" ವಿಶೇಷ ಚೇತನರ ಸಂಘ ಎಂದು ಹೆಸರಿಟ್ಟರು. ಈ ಸಂಘವನ್ನು ರಚಿಸುವುದರ ಮುಖ್ಯ ಉದ್ದೇಶ ಎಲ್ಲಾ ವಿಶೇಷ ಚೇತನರನ್ನು ಒಟ್ಟುಗೂಡಿಸಿ ಒಗ್ಗಟ್ಟಿನಿಂದ ಸಭೆಯನ್ನು ಸೇರಿ ನಿಮ್ಮ ಜೀವನದಲ್ಲಿ ಆಗುವ ಸಮಸ್ಯೆಗಳನ್ನು ಮತ್ತು ಸವಾಲುಗಳನ್ನು ಎದುರಿಸಲು ಮತ್ತು ಪ್ರೋತ್ಸಾಹಿಸಲು ಅನುಕೂಲವಾಗುತ್ತದೆ ಎಂದು ಹೇಳಿದರು. ಪ್ರತಿಯೊಬ್ಬರು ಸಾಮಾಜಿಕ ಭದ್ರಾತ ಯೋಜನೆಗಳಾದ UDID Card, ಮಾಸಿಕ ಪಿಂಚಣಿ, ಗ್ರಾಮ ಪಂಚಾಯತ್ ನಲ್ಲಿ ಮಿಸಲಿಟ್ಟ ಶೇಕಡಾ 5% ಅನುದಾನ ಪಡೆದುಕೊಳ್ಳಬೇಕು. ಸಂಘದಲ್ಲಿ ನಾಯಕತ್ವದೊಂದಿಗೆ ಸಂಘವನ್ನು ಮುನ್ನಡೆಸಿ, ಪ್ರತಿಯೊಂದು ಸವಾಲುಗಳನ್ನು ಎದುರಿಸಿ ವಕಾಲತ್ತು ಮತ್ತು ಲಾಬಿಯೊಂದಿಗೆ ತಮ್ಮ ಹಕ್ಕುಗಳಿಗಾಗಿ ಹೋರಾಡಿ ಮೂಲ ಸೌಕರ್ಯಗಳನ್ನು ಪಡೆದುಕೊಳ್ಳಬೇಕು. ಪ್ರತಿ ತಿಂಗಳು ಕಡ್ಡಾಯವಾಗಿ ಸಭೆಯನ್ನು ಹಮ್ಮಿಕೊಳ್ಳಬೇಕು ಸಮಸ್ಯೆಗಳ ಕುರಿತು ಚರ್ಚಿಸಬೇಕು ಎಂದು ಹೇಳಿದರು. ಈ ಸಂಧರ್ಭದಲ್ಲಿ ಆಪ್ತಸಮಾಲೋಚಕರಾದ ಶ್ರೀಮತಿ ರೂಪಾಲಿಯವರು ಭಾಗವಹಿಸಿದರು. ಸಂಘದಲ್ಲಿ ಒಟ್ಟು 6 ವಿಶೇಷ ಚೇತನರು ಭಾಗವಹಿಸಿದರು.

## “ಮಾನಸಿಕ ಅಸ್ವಸ್ಥತೆ ಕುರಿತು ಜಾಗೃತಿ ಕಾರ್ಯಕ್ರಮ”



ಜೂನ್ 19 2025ರಂದು ಬಸವಕಲ್ಯಾಣ ತಾಲೂಕಿನ ಹಂದ್ರಾಳ (ಕೆ) ಗ್ರಾಮದಲ್ಲಿ ಅರ್ಬಿಟ್ ಸಂಸ್ಥೆಯ ವತಿಯಿಂದ ಶ್ರೀಮತಿ ಅನುರಾಧ ರವರು ಮಾನಸಿಕ ಅಸ್ವಸ್ಥತೆ ಕುರಿತು ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಿದರು. ಅವರು ಕಾರ್ಯಕ್ರಮದಲ್ಲಿ ಮಾನಸಿಕ ಅಸ್ವಸ್ಥತೆ ಎಂದರೇನು? ಅದಕ್ಕೆ ಕಾರಣಗಳು, ಲಕ್ಷಣಗಳು ಮತ್ತು ಜನರಲ್ಲಿರೋ ಮೂಢನಂಬಿಕೆಗಳ ಬಗ್ಗೆ ತಿಳಿಸಿದರು. ಜೊತೆಗೆ ಮಾನಸಿಕ ಅಸ್ವಸ್ಥರನ್ನು ಗುರುತಿಸಿ ಅವರನ್ನು ಚಿಕಿತ್ಸೆಗೆ ಒಳಪಡಿಸಿ ಸಮಾಜದ ಮುಖ್ಯ ವಾಹಿನಿಗೆ ತರುವುದು ನಮ್ಮ ಆರ್ಬಿಟ್ ಸಂಸ್ಥೆಯ ಮುಖ್ಯ ಉದ್ದೇಶವಾಗಿದೆ. ಇಂಥವರನ್ನು ಪ್ರಾಥಮಿಕವಾಗಿ ಪತ್ತೆ ಹಚ್ಚಿ ಜಿಲ್ಲಾ ಮಾನಸಿಕ ಆರೋಗ್ಯ ಶಿಬಿರದಲ್ಲಿ ಮನೋವೈದ್ಯರಿಂದ ಉಚಿತ ತಪಾಸಣೆ ಮತ್ತು ಸರಕಾರಿ ಸೌಲಭ್ಯವಿರುತ್ತದೆ ಎಂದು ತಿಳಿಸಲಾಯಿತು. ಸಮಯಕ್ಕೆ ಸರಿಯಾಗಿ ಮಾತ್ರೆಗಳನ್ನು ತೆಗೆದುಕೊಂಡು ಎಷ್ಟೋ ಮಾನಸಿಕ ಅಸ್ವಸ್ಥ ವ್ಯಕ್ತಿಗಳು ತಮ್ಮ ಹಿಂದಿನ ಜೀವನಕ್ಕೆ ಮರಳಿದ್ದಾರೆ ಎಂದು ತಿಳಿಸಲಾಯಿತು. ಈ ಮಾಹಿತಿಯನ್ನು ಗ್ರಾಮದ 13 ಜನ ಪಡೆದುಕೊಂಡಿರುತ್ತಾರೆ.

## “ತಾಲೂಕ ಆಸ್ಪತ್ರೆಯಲ್ಲಿ ಉಚಿತ ತಪಾಸಣೆ ಹಾಗೂ ಚಿಕಿತ್ಸೆಯ ಸೌಲಭ್ಯ”



13 ಜೂನ್ 2025ರಂದು ಕಮಾಲನಗರ್ ತಾಲೂಕಿನ ಕೊರ್ಯಾಲ್ ಗ್ರಾಮದಲ್ಲಿ ಗ್ರಾಮಸ್ಥರಿಗೆ ಆರ್ಬಿಟ್ ಸಂಸ್ಥೆ ಲಿವ್.ಲವ್.ಲಾಫ್ ಕಾರ್ಯಕ್ರಮದ ಸಂಯುಕ್ತಾಶ್ರಯದಲ್ಲಿ ಮಾನಸಿಕ ಆರೋಗ್ಯ ಕುರಿತು ಜಾಗೃತಿ ಕಾರ್ಯಕ್ರಮವನ್ನು ಕಾರ್ಯಕರ್ತರಾದ ಸಂಗೀತಾ ರವರು ಹಮ್ಮಿಕೊಂಡಿದ್ದರು. ಅರ್ಬಿಟ್ ಸಂಸ್ಥೆಯು ಕಳೆದ 31 ವರ್ಷಗಳಿಂದ ಸಮಾಜ ಸೇವೆ ಮಾಡುತ್ತಲೇ ಬಂದಿದೆ. ಸಮಾಜದಿಂದ ಅಂಚಿಗೆ ತಳ್ಳಲಪಟ್ಟವರಿಗೋಸ್ಕರ ಶ್ರಮಿಸುತ್ತಿದೆ. ಮಾನಸಿಕ ಅಸ್ವಸ್ಥರನ್ನು ಪ್ರಾಥಮಿಕ ಹಂತದಲ್ಲಿ ಪತ್ತೆ ಹಚ್ಚಿ ಅವರನ್ನು ತಾಲೂಕ ಆಸ್ಪತ್ರೆಗೆ ಕರೆದುಕೊಂಡು ಉಚಿತ ತಪಾಸಣೆ ಹಾಗೂ ಚಿಕಿತ್ಸೆಯ ಸೌಲಭ್ಯಗಳ ವ್ಯವಸ್ಥೆ ಮಾಡುತ್ತಿರುವ ಸರ್ಕಾರದ ಜೊತೆಗೆ ಕೈ ಜೋಡಿಸಿ ಅವರಿಗೆ ಅನೇಕ ಸರಕಾರಿ ಸೌಲಭ್ಯಗಳನ್ನು ಪಡೆದುಕೊಡುತ್ತಿದ್ದೇವೆ. ಅಸ್ವಸ್ಥರ ಮನೆಗೆ ಪ್ರತಿ ತಿಂಗಳು ಭೇಟಿ ನೀಡಿ ಮಾತ್ರೆಗಳನ್ನು ಪರಿಶೀಲಿಸಿ, ಅವರಿಗೆ ದಿನನಿತ್ಯದ ಚಟುವಟಿಕೆಗಳ ಮಾಹಿತಿ ನೀಡುತ್ತಿದ್ದೇವೆ. ಈ ನಮ್ಮ ಸೇವೆಗೆ ತಮ್ಮ ಸಹಕಾರಬೇಕೆಂದು ತಿಳಿಸುತ್ತ ಕಾರ್ಯಕ್ರಮವನ್ನು ಮುಕ್ತಾಯ ಗೊಳಿಸಲಾಯಿತು. ಈ ಕಾರ್ಯಕ್ರಮದಲ್ಲಿ ಒಟ್ಟು 15 ಜನರು ಭಾಗವಹಿಸಿದರು.

## “ಜನ ಜಾಗೃತಿ ಕಾರ್ಯಕ್ರಮ”



19 ಜೂನ್ 2025ರಂದು ಔರಾದ್ ತಾಲೂಕಿನ ವಡಗಾಂವ್ ಗ್ರಾಮದಲ್ಲಿ ಲಿವ್.ಲವ್.ಲಾಫ್ ಕಾರ್ಯಕ್ರಮದ ಕಾರ್ಯಕರ್ತರಾದ ಸುಕ್ಕು ರವರು ಜನ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು. ಮಾನಸಿಕ ಅಸ್ವಸ್ಥತೆಯ ಆರಂಭ ಹಾಗೂ ಹಂತಗಳ ಬಗ್ಗೆ ತಿಳಿಸಿದರು. ಇದ್ದನ್ನು ನಿಯಂತ್ರಿಸಲು ನಮ್ಮ ಮನಸ್ಥಿತಿಯನ್ನು ಯಾವ ರೀತಿ ಹತೋಟಿಯಲ್ಲಿ ಇರಿಸಬೇಕೆಂದು ತಿಳಿಸಲಾಯಿತು. ಮಾನಸಿಕ ಅಸ್ವಸ್ಥತೆಯು ದೇವರ ಶಾಪವಲ್ಲ ಬದಲಾಗಿ ಮಾನವನ ಮನಸ್ಥಿತಿ ಯಷ್ಟೇ ಅದನ್ನು ಗುಣಪಡಿಸಲು ಸರಕಾರವು ಉಚಿತ ತಪಾಸಣೆಯನ್ನು ಹಮ್ಮಿಕೊಂಡಿದ್ದಾರೆ ಎಂದು ತಪಾಸಣೆಯ ವಿವರವನ್ನು ನೀಡಲಾಯಿತು. ವ್ಯಕ್ತಿಗಳ ನಡವಳಿಕೆ ವಿಚಿತ್ರವಾಗಿ ಅಂದರೆ ತನ್ನಷ್ಟಕ್ಕೆ ತಾನು ಮಾತಾಡುವುದು, ಹೆಚ್ಚು ನಿದ್ದೆ ಮಾಡುವುದು, ವಿನಾಕಾರಣ ನಗುವುದು ಹಾಗೂ ವಿನಾಕಾರಣ ಅಳುವುದು ಹಾಗೂ ಸಿಟ್ಟು ಮಾಡುವುದು ಕಂಡು ಬಂದರೆ ನಮ್ಮ ಸಹಾಯವಾಣಿಗೆ 9036664271 ಗೆ ಸಂಪರ್ಕಿಸಬೇಕಾಗಿ ತಿಳಿಸಲಾಯಿತು. ಈ ಕಾರ್ಯಕ್ರಮದಲ್ಲಿ ಒಟ್ಟು 18 ಜನ ಭಾಗವಹಿಸಿದರು.

## “ಮಾನಸಿಕ ಅಸ್ವಸ್ಥರ ಜಾಗೃತಿ ಕಾರ್ಯಕ್ರಮ”



16 ಜೂನ್ 2025ರಂದು ಬಸವಕಲ್ಯಾಣ ತಾಲೂಕಿನ ರಾಜೋಳ ಗ್ರಾಮದ ಸರಕಾರಿ ಪ್ರೌಢ ಶಾಲೆಯಲ್ಲಿ ಆರ್ಬಿಟ್ ಸಂಸ್ಥೆಯ ಹಾಗೂ ನವಜೀವನ ಲಿವ್.ಲವ್.ಲಾಫ್ ಕಾರ್ಯಕ್ರಮದ ಸಂಯುಕ್ತ ಆಶ್ರಯದಲ್ಲಿ ಶ್ರೀಮತಿ ಸುಜಾತ ಅವರು ಜಾಗ್ರತಿಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಮಾನಸಿಕವಾಗಿ ಶಾರೀರಕವಾಗಿ ಮತ್ತು ಸಾಮಾಜಿಕವಾಗಿ ಚೆನ್ನಾಗಿರುವುದೇ ಆರೋಗ್ಯ ಎಂದು ಹೇಳಿದರು. ಮಾನಸಿಕ ಅಸ್ವಸ್ಥತೆ ಎಂದರೆ ಇದು ಒಂದು ಮೆದುಳಿನ ಕಾಯಿಲೆಯಾಗಿದ್ದು, ಮೆದುಳಿನಲ್ಲಿ ಏರುಪೇರಾದರೆ ಮನುಷ್ಯನ ವರ್ತನೆಯಲ್ಲಿ ಬದಲಾವಣೆಯಾಗಿ ತನ್ನ ದಿನ ನಿತ್ಯದ ಚಟುವಟಿಕೆಗಳಲ್ಲಿ ತೊಡಕು ಉಂಟಾಗುವುವುದು. ಭಯ, ಆತಂಕ, ಖಿನ್ನತೆ ಇಂತಹ ಲಕ್ಷಣಗಳಿದ್ದರೆ ಮನೋವೈದ್ಯರ ಬಳಿ ಚಿಕಿತ್ಸೆ ನೀಡುವುದರ ಮೂಲಕ ಗುಣಪಡಿಸಬಹುದು. ಸಮುದಾಯದಲ್ಲಿ ಮಾನಸಿಕ ಅಸ್ವಸ್ಥರು ಕಂಡರೆ ಅವರನ್ನು ನಿರ್ಲಕ್ಷಿಸದೆ ಸಹಾಯ ಮಾಡುವ ಮನೋಭಾವನೆ ನಮ್ಮದಾಗಿರಬೇಕು. ಮತ್ತು ಸತತವಾಗಿ ಚಿಕಿತ್ಸೆ ನೀಡಿದರೆ ಅವರು ದಿನೇ ದಿನೇ ಬದಲಾಗುವರು. ಇದಕ್ಕಾಗಿ ಪ್ರತಿ ಮಂಗಳವಾರದಂದು ತಾಲೂಕ ಆಸ್ಪತ್ರೆಯಲ್ಲಿ ಉಚಿತ ತಪಾಸಣೆಯನ್ನು ನಡೆಸಲಾಗುತ್ತಿದೆ ಎಂದು ತಿಳಿಸಲಾಯಿತು. 30 ವರ್ಷಗಳಿಂದ ಸಮಾಜ ಸೇವೆಯಲ್ಲಿ ತೊಡಗಿರುವ ಅರ್ಬೀಟ್ ಸಂಸ್ಥೆಯು ಕಳೆದ 3 ವರ್ಷಗಳಿಂದ ಮಾನಸಿಕ ಅಸ್ವಸ್ಥರ ಮಧ್ಯೆ ಕೆಲಸ ಮಾಡುತ್ತಿದೆ. ಈ ಕಾಯಿಲೆಗೆ ತುತ್ತಾದ ಎಷ್ಟೋ ಜನರನ್ನು ಗುಣಪಡಿಸುವಲ್ಲಿ ಸಂಸ್ಥೆಯು ಯಶಸ್ಸನ್ನು ಕಂಡಿದೆ ಎಂದು ತಿಳಿಸಲಾಯಿತು. ತಮ್ಮ ಸುತ್ತಮುತ್ತ ಎಲ್ಲಾದರೂ ಮಾನಸಿಕ ವ್ಯಕ್ತಿ ಕಂಡರೆ ನಮ್ಮ ಸಹಾಯವಾಣಿ 9036664271 ಗೆ ಕರೆ ಮಾಡಿ ತಿಳಿಸುವುದು ಎಂದು ಸವಿವರವಾಗಿ ಮಕ್ಕಳಿಗೆ ಮತ್ತು ಸಹ ಶಿಕ್ಷಕರಿಗೆ ಹೇಳಲಾಯಿತು. ಈ ಜಾಗೃತಿ ಕಾರ್ಯಕ್ರಮದಲ್ಲಿ ಒಟ್ಟು 54 ಮಕ್ಕಳು ಒಳಗೊಂಡಿದ್ದರು.

## “ಮಾನಸಿಕ ಆರೋಗ್ಯ ಕುರಿತು ಜಾಗೃತಿ ಕಾರ್ಯಕ್ರಮ”



ಜೂನ್ 4 2025ರಂದು ಹುಲಸೂರು ತಾಲೂಕಿನ ಗೋರಟಾ (ಬಿ) ಗ್ರಾಮದ ಶ್ರೀ ಗುರುಪಾದ ಶಿವಚಾರ್ಯ ಪ್ರೌಢ ಶಾಲೆಯಲ್ಲಿ ಆರ್ಬಿಟ್ ಸಂಸ್ಥೆಯ ನವಜೀವನ ಎಲ್.ಎಲ್. ಎಲ್. ಎಫ್ ಕಾರ್ಯಕ್ರಮದ ಸಂಯುಕ್ತ ಆಶ್ರಯದಲ್ಲಿ ಮಾನಸಿಕ ಆರೋಗ್ಯ ಕುರಿತು ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದ ಸಮುದಾಯ ಕಾರ್ಯಕರ್ತರಾದ ಶ್ರೀ ಮಹಾದೇವ ಮಾನಕಾರೆ ಅವರು ಮಾತನಾಡಿ, ಆರ್ಬಿಟ್ ಸಂಸ್ಥೆಯು ಸುಮಾರು 30 ವರ್ಷಗಳಿಂದ ಅನೇಕ ಸಮಾಜ ಸೇವಾ ಕಾರ್ಯಕ್ರಮಗಳನ್ನು ಮಾಡುತ್ತಾ, ಬಡ ಜನರಿಗೋಸ್ಕರ ಹಗಲಿರುಳು ದುಡಿಯುತಿದೆ. ಇತ್ತೀಚಿಗೆ ಮೂರು ವರ್ಷಗಳಿಂದ ಮಾನಸಿಕ ಅಸ್ವಸ್ಥರ ಹಾಗೂ ಪೋಷಕರ ಜೊತೆಯಲ್ಲಿ ಕೆಲಸ ಮಾಡುತ್ತಿದೆ. ಮಾನಸಿಕ ಅಸ್ವಸ್ಥತರನ್ನು ಗುರುತಿಸಿ ಮುಖ್ಯವಾಹಿನಿಗೆ ತರಲು ಶ್ರಮಿಸುತ್ತಿದೆ. ಪ್ರಾಥಮಿಕವಾಗಿ ಮಾನಸಿಕ ಅಸ್ವಸ್ಥರನ್ನು ಪತ್ತೆ ಹಚ್ಚಿ ಅವರನ್ನು ಜಿಲ್ಲಾ ಮಾನಸಿಕ ಆರೋಗ್ಯ ಶಿಬಿರದಲ್ಲಿ ಮನೋವೈದ್ಯರಿಂದ ಉಚಿತ ತಪಾಸಣೆ ಹಾಗೂ ಚಿಕಿತ್ಸೆಯ ಸೌಲಭ್ಯಗಳ ವ್ಯವಸ್ಥೆಗೆ ಒಳಪಡಿಸಿ ಅವರನ್ನು ಸಮುದಾಯದೆಡೆ ತರಲು ಪ್ರಯತ್ನಿಸುತ್ತಿದೆ. ತಪಾಸಣೆಯ ಪ್ರಯುಕ್ತ ಪ್ರತಿ ಮಂಗಳವಾರ ಬಸವಕಲ್ಯಾಣ ಸಾರ್ವಜನಿಕ ಆಸ್ಪತ್ರೆಯಲ್ಲಿ ಉಚಿತ ತಪಾಸಣೆ ನೀಡಲಾಗುವುದು. ಇದರ ಉಪಯೋಗ ಸರ್ವರೂ ಪಡೆಯಬಹುದು. ಈ ಕಾರ್ಯದಲ್ಲಿ ತಾವು ಕೈ ಜೋಡಿಸಿ ಇಂತಹ ವ್ಯಕ್ತಿಗಳು ಕಂಡುಬಂದಲ್ಲಿ ಆರ್ಬಿಟ್ ಸಂಸ್ಥೆಯ ಸಹಾಯವಾಣಿ ಸಂಖ್ಯೆ 9036664271 ಕರೆಮಾಡಿ ಮಾಹಿತಿ ನೀಡಿ. ಮಕ್ಕಳು ಪರೀಕ್ಷೆ ಬಂದಾಗ ಆತಂಕ ಮತ್ತು ಒತ್ತಡ ಒಳಗಾಗಬಾರದು ಎಂದು ತಿಳಿಸಲಾಯಿತು. ಈ ಜಾಗ್ರತಿ ಕಾರ್ಯಕ್ರಮದಲ್ಲಿ ಶಾಲೆಯ ಮುಖ್ಯ ಗುರುಗಳು, ಶಿಕ್ಷಕರು ಹಾಗೂ ಮಕ್ಕಳು ಸೇರಿ ಒಟ್ಟು 37 ಜನರು ಭಾಗವಹಿಸಿ ಸದುಪಯೋಗ ಪಡೆದುಕೊಂಡರು.

## “ಮಾನಸಿಕ ಆರೋಗ್ಯ ಜಾಗೃತಿ ಕಾರ್ಯಕ್ರಮ”



19 ಜೂನ್ 2025ರಂದು ಬೀದರ್ ತಾಲೂಕಿನ ಧರ್ಮಪುರ್ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ನವಜೀವನ ಲಿವ್. ಲವ್. ಲಾಫ್ ಫೌಂಡೇಶನ್ ಕಾರ್ಯಕ್ರಮದ ಸಂಯುಕ್ತ ಆಶ್ರಯದಲ್ಲಿ ಮಾನಸಿಕ ಆರೋಗ್ಯ ಜಾಗೃತಿ ಕಾರ್ಯಕ್ರಮವನ್ನು ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಾದ ಶ್ರೀ ನೋಹಾನ್ ರವರು ಹಮ್ಮಿಗೊಂಡಿದ್ದರು. ಈ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಅವರು ಮಾನಸಿಕ ಕಾಯಿಲೆ ಹಾಗೂ ದೈಹಿಕ ಕಾಯಿಲೆಗೆ ಇರುವ ವ್ಯತ್ಯಾಸವನ್ನು ತಿಳಿಸಿದರು. ಮಾನಸಿಕ ಮತ್ತು ದೈಹಿಕ ಈ ಎರಡು ಕಾಯಿಲೆಗೆ ತನ್ನದೇಆದ ಔಷಧ ಲಭ್ಯವಿದೆ ಎಂದು ತಿಳಿಸಿದರು. ಮೂಡನಂಬಿಕೆಯಿಂದ ಮತ್ತೊಬ್ಬರ ಜೀವನವನ್ನು ಕತ್ತಲೆಯಲ್ಲಿ ಕಳೆಯಲು ನಾವು ಹೊಣೆಗಾರರಾಗಬಾರದು. ಬದಲಾಗಿ ಅವರ ಜೀವನಕ್ಕೆ ಸರ್ಕಾರದೊಂದಿಗೆ ಮತ್ತು ಅರ್ಬಿಟ್ ಸಂಸ್ಥೆಯೊಂದಿಗೆ ಕೈ ಜೋಡಿಸಬೇಕೆಂದು ಕರೆ ನೀಡಿದರು. ಸಮುದಾಯದಲ್ಲಿ ಯಾರಾದರೂ ಮಾನಸಿಕ ಅಸ್ವಸ್ಥರು ಇದ್ದರೆ ಅಂಥವರಿಗೆ ಉಚಿತ ತಪಾಸಣೆ ಮತ್ತು ಉಚಿತ ಚಿಕಿತ್ಸೆಯನ್ನು ಸರ್ಕಾರದ ವತಿಯಿಂದ ನೀಡಲಾಗುವುದು ಎಂದು ನೆರೆದಂತ ಸಮುದಾಯಜ ಜನರಿಗೆ ಮಾಹಿತಿ ನೀಡಿದರು. ಇದರ ಜೊತೆಗೆ ಈ ಕಾಯಿಲೆಯ ಲಕ್ಷಣಗಳನ್ನು ಹಾಗೂ ನಿಯಂತ್ರಿಸುವ ಮಾದರಿಯನ್ನು ತಿಳಿಸಲಾಯಿತು. ಈ ಮಾನಸಿಕ ಆರೋಗ್ಯ ಜಾಗೃತಿ ಕಾರ್ಯಕ್ರಮದಲ್ಲಿ ಆರೋಗ್ಯ ಉಪ ಕೇಂದ್ರದ ಪಿ. ಹೆಚ್. ಸಿ. ಒ ಮತ್ತು ಹೆಚ್. ಐ. ಓ, ಶಾಲೆಯ ಮುಖ್ಯ ಗುರುಗಳು ಮತ್ತು ಆಶಾ ಕಾರ್ಯಕರ್ತರು ಹಾಗೆ ಒಟ್ಟು 25 ಮಕ್ಕಳು ಭಾಗವಹಿಸಿದರು.

# ಸೇವಾ ಸಂಗಮ ಸಂಸ್ಥೆ, ಕಲಬುರಗಿ

## “ಬೆಳವಣಿಗೆಯ ಹಂತಗಳ ವಿಶ್ಲೇಷಣೆ”



ಮಗುವಿಗೆ ಕಿವಿ ಕೇಳಿಸುವುದಿಲ್ಲ ಮಾತು ಬರುವುದಿಲ್ಲ (ಹತ್ತಿರದಿಂದ ಶಬ್ದ ಮಾಡಿದರೂ ಹಾಗೂ ದೂರದಿಂದ ಶಬ್ದಮಾಡಿದರು) ಈ ಕಾರಣದಿಂದ ಮಗುವಿನ ಬುದ್ಧಿಶಕ್ತಿ ಮತ್ತು ಮಗುವಿನ ಭಾಷೆ ಬೆಳವಣಿಗೆಯಲ್ಲಿ ಮಗು ಕುಂಠಿತಗೊಂಡಿರುತ್ತಾನೆ. ಪ್ರಥಮವಾಗಿ ಮಗುವಿನ ಬೆಳವಣಿಗೆಯ ಹಂತಗಳ ವಿಶ್ಲೇಷಣೆ ಮಾಡಲಾಯಿತು. ಮಗುವಿಗೆ ಮನೆಯ ಪರಿಸರದಲ್ಲಿ ಲಭ್ಯವಿರುವ ವಸ್ತುಗಳ ಪರಿಚಯ ಮಾಡಿಸಲಾಯಿತು. ಹಣ್ಣು, ತರಕಾರಿ, ಆಹಾರ, ಬಣ್ಣಗಳ, ಸಾಮಾನ್ಯ ಅಕ್ಷರಗಳ, ಸಖ್ಯೆಗಳ ಪರಿಚಯವನ್ನು ಚಟುವಟಿಕೆಗಳ ಮೂಲಕ ಮಾಡಿಸಲಾತು. ಇದರ ಪರಿಣಾಮವಾಗಿ ಮಗುವಿಗೆ ವಸ್ತುಗಳನ್ನು ಕಂಡಕೂಡಲೇ ಅದರ ಹೆಸರುಗಳನ್ನು ಹೇಳುವ ಪ್ರಯತ್ನವನ್ನು ಮಾಡುತ್ತಾನೆ ಅದೇರೀತಿ ಮನೆಯಲ್ಲಿ ತಂದೆ ತಾಯಿಯವರಿಗೆ ಅಪ್ಪ ಅಮ್ಮ ಎಂದು ಕರೆಯುವ ಪ್ರಯತ್ನವನ್ನು ಮಾಡುತ್ತಿದ್ದಾನೆ. ಇದರಿಂದ ಮಗುವಿನ ಬುದ್ಧಿ ಬೆಳವಣಿಗೆಯಾಗುತ್ತದೆ. ವಿಶೇಷವಾಗಿ ಮಗುವಿಗೆ ಪ್ರತಿದಿನ Oromtoer and Blowing activity ಮನೆಯಲ್ಲಿ ತಂದೆ ತಾಯಿಯವರಿಗೆ ಮಾಡಿಸುತ್ತಿದ್ದಾರೆ. ಈ ಕಾರ್ಯದಲ್ಲಿ ಮಗು ಮಾತನಾಡಲು ಪ್ರಯತ್ನಿಸುತ್ತಿರುವುದನ್ನು ಕಂಡು ತಮ್ಮ ಖುಷಿ ವ್ಯಕ್ತಪಡಿಸುತ್ತಾರೆ. ಇೊತೆಗೆ ಸೇವಾಸಂಗಮ ಸಂಸ್ಥೆಯವರೆ ನಮ್ಮ ಮಗುವಿನ ಈ ಬದಲಾವಣೆಗೆ ಕಾರಣ ಎಂದು ಹೇಳುತ್ತಾರೆ.

## “ಬೆಳವಣಿಗೆಯಲ್ಲಿ ಕುಂಟಿತ ಮಕ್ಕಳ ನ್ಯೂನತ್ತೆ ಕುರಿತು ಅರಿವು”



ಬೆಳವಣಿಗೆಯಲ್ಲಿ ಕುಂಟಿತ ವಿರುವ ಮಕ್ಕಳ ನ್ಯೂನತ್ತೆ ಕಾರಣಗಳ ಬಗ್ಗೆ ಹಾಗೂ ಅವರಿಗೆ ಸೇವಾಸಂಗಮ ಸಂಸ್ಥೆಯಿಂದ ಹಾಗೂ ಸರ್ಕಾರದಿಂದ ಸಿಗುವಂತಹ ಸೌಲಭ್ಯಗಳನ್ನು ದೂರಕಿಸುವಲ್ಲಿ ಹೇಗೆ ಕಾರ್ಯ ನಿರ್ವಹಿಸುತ್ತದೆ ಎಂಬುದನ್ನು ಕು. ಅನಿತಾಅವರು ಮಾಹಿತಿ ತಿಳಿಸಲಾಯಿತು. ಈ ಕಾರ್ಯಕ್ರಮದಲ್ಲಿ 12 ಜನ ಭಾಗವಹಿಸಿದ್ದರು. ಅಂಗನವಾಡಿ ಕಾರ್ಯಕರ್ತೆಯದ ಶ್ರೀಮತಿ ಶೋಭಾ ಉಪಸ್ಥಿತರಿದ್ದರು.

## “ಚೇತನ ಉಪಕೇಂದ್ರದಲ್ಲಿ ಪಾಲಕರ ಸಭೆ”



17 ಜೂನ್ 2025ರಂದು ಕಲಬುರ್ಗಿ ತಾಲೂಕಿನ ಸಾವಳಗಿ ಗ್ರಾಮದ ಚೇತನ ಉಪಕೇಂದ್ರದಲ್ಲಿ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಯೋಜನೆ ಅಡಿಯಲ್ಲಿ ಪಾಲಕರ ಸಭೆಯನ್ನು ಮಾಡಲಾಯಿತು. ಈ ಸಭೆಯನ್ನು ಉದ್ದೇಶಿಸಿ ಮಾತನಾಡಿದ VRW ಶಿವಾನಂದ ರವರು ಸಾಮಾಜಿಕ ಭದ್ರತೆಯ ಕುರಿತು ತಿಳಿಸಿದರು. ಸಂಘದ ರಚನೆ ಉಳಿತಾಯದ ಕುರಿತು ಕುಮಾರಿ ಲಕ್ಷ್ಮಿಅವರು 9 ಜನ ಪಾಲಕರಿಗೆ ಮಾಹಿತಿ ತಿಳಿಸಿದರು.

## “ಕೇಂದ್ರ ಆಧಾರಿತ ಚಟುವಟಿಕೆಗಳ ಕಾರ್ಯಕ್ರಮ”



28 ಜೂನ್ 2025 ರಂದು ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಹಾಗೂ ಅಜೀಂ ಪ್ರೇಮ್ ಜೀ ಫೌಂಡೇಶನ್ ಅಡಿಯಲ್ಲಿ ಕಲಬುರಗಿ ನಗರ ಪ್ರದೇಶದಲ್ಲಿ ಬರುವ ಚೇತನ ಕೇಂದ್ರದಲ್ಲಿ ಶ್ರೀ. ಗುರುರಾಜ ಸರ್ ಹಾಗೂ ಶ್ರೀ. ರಂಗನಾಥ ಸರ್ ಕೇಂದ್ರದಲ್ಲಿರುವ ಮಕ್ಕಳ ಚಟುಟಿಕೆ ಕುರಿತು ವೀಕ್ಷಣೆ ಮಾಡಿ ಹಾಗೂ ಪಾಲಕರ ಜೊತೆ ಚರ್ಚಿಸಿದರು. ಮತು ಸೇವಾಸಂಗಮ ಸಂಸ್ಥೆಯ ನಡೆದುಬಂದ ಹಾದಿ ಮತ್ತು ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣವು ಬೆಳವಣಿಗೆಯಲ್ಲಿ ಕುಂಠಿತ ವಿರುವ ಮಕ್ಕಳನ್ನು ಯಾವರೀತಿ ಕೇಂದ್ರ ಆಧಾರಿತ ಹಾಗೂ ಗೃಹ ಆಧಾರಿತ ಚಟುವಟಿಕೆಗಳ ನೀಡುವುದರ ಮೂಲಕ ಮಕ್ಕಳಲ್ಲಾದ ಬದಲಾವಣೆಗಳನ್ನು ವೀಕ್ಷಿಸಿ ಪಾಲಕರೊಂದಿಗೆ ಚರ್ಚಿಸಿದರು. ಈ ಒಂದು ಕಾರ್ಯಕ್ರಮದಲ್ಲಿ ಸೇವಾಸಂಗಮ ಸಂಸ್ಥೆಯ ನಿರ್ದೇಶಕರಾದ ಫಾದರ ವಿಕ್ಟರ ವಾಸ್ ಸಂಯೋಜಕರಾದ ಶ್ರೀಮತಿ ಶ್ವೇತಾ ಮೇಡಂ ಹಾಗೂ ಕಾರ್ಯಕರ್ತರು ಪಾಲಕರು ಉಪಸ್ಥಿತರಿದ್ದರು.

## “ಬೆಳವಣಿಗೆಯಲ್ಲಿ ಕುಂಠಿತ ಮಕ್ಕಳಿಗೆ ಸರ್ಕಾರಿ ಸೌಲಭ್ಯಗಳ ಮಾಹಿತಿ”



ಕಲಬುರ್ಗಿ ನಗರ ಪ್ರದೇಶದಲ್ಲಿ ಬರುವಂತಹ ಚೇತನ ಕೇಂದ್ರದಲ್ಲಿ 21 ಜೂನ್ 2025ರಂದು ಸೇವಾಸಂಗಮ ಸಂಸ್ಥೆ ಹಾಗೂ ಅಜೀಂ ಪ್ರೇಮಜಿ ಫೌಂಡೇಶನ್, ಕಲಬುರ್ಗಿ ಇವರ ಸಂಯುಕ್ತ ಆಶ್ರಯದಲ್ಲಿ District level parents champion group meeting ಹಮ್ಮಿಕೊಳ್ಳಲಾಯಿತು. ಶೀಘ್ರ ಪತ್ತೆಹಚ್ಚುವಿಕೆ ಮತು ಆರಂಭಿಕ ಶಿಕ್ಷಣ ಯೋಜನೆಯ ಕಾರ್ಯಕರ್ತೆಯಾದ ಶ್ರೀಮತಿ ಶಿವಾಕಾಂತಾ ಅವರು ಬೆಳವಣಿಗೆಯಲ್ಲಿ ಕುಂಠಿತ ವಿರುವ ಮಕ್ಕಳಿಗೆ ಇರುವ ಸರ್ಕಾರಿ ಸೌಲಭ್ಯಗಳನ್ನು ಯಾವರೀತಿ ಪಡೆದುಕೋಳಬೇಕು ಎಂಬುದರ ಕುರಿತು ಮಾಹಿತಿಯನ್ನು ನೀಡಿದರು. ಈ ಕಾರ್ಯಕ್ರಮದಲ್ಲಿ ಶ್ರೀಮತಿ ವಿಜಯಲಕ್ಷ್ಮಿ ಕು. ಅನಿತಾ ಹಾಗೂ ಶ್ರೀ. ಚಂದ್ರಕಾಂತ ಅವರು ಹಾಗೂ 13 ಜನ ಪಾಲಕರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## “ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆ ತರಬೇತಿ”



28 ಜೂನ್ 2025ರಂದು ಕಲ್ಬುರ್ಗಿ ಜಿಲ್ಲೆಯಲ್ಲಿ ಬರುವ ತಿಳಗೊಳ ಗ್ರಾಮದಲ್ಲಿ ಬರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ. ಸೇವಾಸಂಗಮ ಸಂಸ್ಥೆ ಮತ್ತು ಅಜೀಂ ಪ್ರೇಮ್ ಜೀ ಫೌಂಡೇಶನ್, ಸಂಯುಕ್ತ ಆಶ್ರಯದಲ್ಲಿ, ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆ ತರಬೇತಿಯ ಕುರಿತು 7 ಮತ್ತು 8 ತರಗತಿ ವಿದ್ಯಾರ್ಥಿಗಳಿಗೆಬ ಬೆಳವಣಿಗೆಯಲ್ಲಿ ಕುಂಠಿತ ಇರುವ ಮಕ್ಕಳು ಯಾವಯಾವ ರೀತಿಯಾಗಿ ಇರುವರು ಎಂದರೆ ಮಗು ಹುಟ್ಟಿದ ತಕ್ಷಣ ಅಳಬೇಕು ಇಲ್ಲವಾದರೆ ಮಗುವಿನ ಬೆಳವಣಿಗೆಯಲ್ಲಿ ಕುಂಟಿತಗೊಳ್ಳುವುದು, ಮೂರು ತಿಂಗಳಲ್ಲಿ ಮಗುವಿನ ಕತ್ತು ನಿಲ್ಲಬೇಕು, 9 ತಿಂಗಳಿಗೆ ಮಗು ಕುಳಿತುಕೊಳ್ಳಬೇಕು ಮತ್ತು ಅಂಬೆಗಾಲು ಹಾಕಬೇಕು ಒಂದು ವರ್ಷದಲ್ಲಿ ಮಗು ಯಾರು ಸಹಾಯ ವಿಲ್ಲದೆ ನಡೆಯುವುದನ್ನು ಕಲಿಯಬೇಕು, ಎರಡು ವರ್ಷದಲ್ಲಿ ಮಗು ಸಂಪೂರ್ಣವಾಗಿ ಮನೆಯವರ ಹೆಸರುಗಳನ್ನು ಹೇಳಬೇಕು ಮತ್ತು ಮನೆಯ ವಾತಾವರಣಕ್ಕೆ ಮಗು ಹೊಂದಿಕೊಳ್ಳಬೇಕು. ಮೂರು ವರ್ಷಕ್ಕೆ ಮಗು ಅಂಗನವಾಡಿ ಕೇಂದ್ರಕ್ಕೆ ಹೋಗಬೇಕು ಎಲ್ಲ ಮಕ್ಕಳ ಜೊತೆ ಸಾಮಾಜಿಕವಾಗಿ ಹೊಂದಿಕೊಳ್ಳಬೇಕು, ಆರು ವರ್ಷದಲ್ಲಿ ಮಗು ಶಾಲೆಗೆ ಹೋಗಿ ಅಕ್ಷರ ಜ್ಞಾನ ಪಡೆದುಕೊಳ್ಳಬೇಕು. ಈ ಎಲ್ಲಾ ಮೇಲಿನ ಅಂಶಗಳು ಒಂದು ವೇಳೆ ಮಗುವಿನಲ್ಲಿ ಕಂಡು ಬಾರದೆ ಹೋದರೆ ಮಗುವಿನ ಬೆಳವಣಿಗೆ ಹಂತದಲ್ಲಿ ಕುಂಟಿತಗೊಂಡಿದೆ ಎಂದು ತಿಳಿದುಕೊಳ್ಳಬೇಕು ಎಂದು ಕಾರ್ಯಕರ್ತೆಯಾದ ಶ್ರೀಮತಿ ದಾಕ್ಷಾಯಣಿ ಯವರು ವಿದ್ಯಾರ್ಥಿಗಳಿಗೆ ಬೆಳವಣಿಗೆಯಲ್ಲಿ ಕುಂಟಿತ ಇರುವ ಮಕ್ಕಳ ಬಗ್ಗೆ ಮಾಹಿತಿ ನೀಡಿದ್ದರು. ಈ ಒಂದು ಕಾರ್ಯಕ್ರಮದಲ್ಲಿ ಒಟ್ಟು 50 ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## “ಬಾಲ್ಯವಿವಾಹ ಬಗ್ಗೆ ಮಾಹಿತಿ”



ಜೂನ್ 19 2025ರಂದು ಮಿಲತನಗರ ಅಂಗನವಾಡಿ ಕೇಂದ್ರ ಮೂರರಲ್ಲಿ ಹತ್ತು ಜನ ಮಹಿಳೆಯರಿಗೆ ಬಾಲ್ಯವಿವಾಹ ಬಗ್ಗೆ ಮಾಹಿತಿಯನ್ನು ನೀಡಲಾಯಿತು. ಬಾಲ್ಯವಿವಾಹ ಮಾಡುವುದರಿಂದ ಆಗುವ ಹಾನಿಗಳ ಮತ್ತು ಪುರುಷರಿಗೆ 21 ವರ್ಷ ಮಹಿಳೆಯರಿಗೆ 18 ವರ್ಷ ಮುಗಿದ ನಂತರ ಮದುವೆ ಮಾಡುವುದು. 18 ವರ್ಷದ ಒಳಗಡೆ ಮದುವೆ ಮಾಡಿದರೆ ವಿಶೇಷ ವಿಕಲ ಚೇತನ ಮಕ್ಕಳ ಹುಟ್ಟುವುದು ಹಾಗೂ ಮಗು ಹಾಗು ತಾಯಿಗೆ ಸಾವನ್ನು ಸಂಭವಿಸುವದು ಎಂದು ಶ್ರೀಯುತ ಚಂದ್ರಕಾಂತ್ರ ರವರು ಮಾಹಿತಿಯನ್ನು ನೀಡಿದರು.

## “ಟೆಂಟ್ ಹೌಸ ಕಾರ್ಯಕ್ರಮ”




23 ಜೂನ್ 2025ರಂದು ಸೇವಾಸಂಗಮ ಸಂಸ್ಥೆ ಮತ್ತು ಅಜೀಂ ಪ್ರೇಮಜಿ ಫೌಂಡೇಶನ್, ಸಂಯೋಗದಲ್ಲಿ ಕಲ್ಬುರ್ಗಿ ತಾಲೂಕಿನ ಹತ್ತಗುಂದ ಗ್ರಾಮದಲ್ಲಿ ಲಕ್ಷ್ಮಿ ದೇವಿಯ ಜಾತ್ರಾ ಮಹೋತ್ಸವದಲ್ಲಿ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯ ಕುರಿತು ಟೆಂಟ್ ಹೌಸ ಕಾರ್ಯಕ್ರಮವನ್ನು ಆಯೋಜಿಸಲಾಯಿತು. 0–6 ವರ್ಷದೊಳಗಿನ ಮಗುವಿನಲ್ಲಿ ಮೂರು ತಿಂಗಳಿಗೆ ಕತ್ತು ನಿಲ್ಲದಿರುವುದು ಆರು ತಿಂಗಳಿಗೆ ಹೊರಳಾಡುವುದು ಕುಳಿತುಕೊಳ್ಳಬೇಕು ಅಂದರೆ ಒಂದು ವರ್ಷದಲ್ಲಿ ಮಗು ಸ್ವತಂತ್ರವಾಗಿ ನಡೆಯಬೇಕು ಹಾಗೂ ಮೂರುವರ್ಷದಲ್ಲಿ ಮಗು ಚೆನ್ನಾಗಿ ಮಾತನಾಡಬೇಕು ಒಂದುವೇಳೆ ಮಾತನಾಡದಿದ್ದರೆ, ಮಗು ಬೆಳವಣಿಗೆಯಲ್ಲಿ ಕುಂಟಿತ ಹೊಂದಿದೆ ಎಂದು ತಿಳಿದುಬರುತ್ತದೆ. ಈ ಮೇಲಿನ ಎಲ್ಲ ಲಕ್ಷಣಗಳು ಕಂಡುಬಂದರೆ ಕರ ಪತ್ರದ ಮೇಲೆ ಇರುವ ನಂಬರ್ಗೆ ಫೋನ್ಮಾಡಿ ತಿಳಿಸಿರಿ ಎಂದು ಕರಪತ್ರ ನೀಡುವುದರ ಮೂಲಕ ಕುಮಾರಿ ಲಕ್ಷ್ಮಿಅವರು ಒಟ್ಟು 300 ಜನ ಗ್ರಾಮಸ್ಥರಿಗೆ ಅರಿವು ಮೂಡಿಸಿದರು.

## “ಅಂಗನವಾಡಿ ಕೇಂದ್ರದಲ್ಲಿ ಪಾಲಕರ ಸಭೆ”

20 ಜೂನ್ 2025ರಂದು ಸೇವಾಸಂಗಮ ಸಂಸ್ಥೆ ಮತ್ತು ಅಜೀಂ ಪ್ರೇಮ್ ಜೀ ಯವರ ಸಂಯೋಗದಲ್ಲಿ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಯೋಜನೆಯ ಅಡಿಯಲ್ಲಿ ಕಲ್ಬುರ್ಗಿ ನಗರ ಪ್ರದೇಶದಲ್ಲಿರುವ ಸಾಬೀರ್ಮಜಿದ ಅಂಗನವಾಡಿ ಕೇಂದ್ರದಲ್ಲಿ ಪಾಲಕರ ಸಭೆಯನ್ನು ಮಾಡಲಾಯಿತು. ಈ ಸಭೆಯಲ್ಲಿ ವಿಕಲ ಚೇತನ ಮಕ್ಕಳಿಗೆ ಸರಕಾರದಿಂದ ಸಿಗುವ ಸೌಲಭ್ಯಗಳು ಕುರಿತು ಮತ್ತು ಮಕ್ಕಳ ಶಿಕ್ಷಣದ ಕುರಿತು 2016ರ ವಿಕಲ ಚೇತನ ಮಕ್ಕಳಿಗೆ ಶಿಕ್ಷಣದ ಸೌಲಭ್ಯಗಳ ಕುರಿತು ಅವುಗಳನ್ನು ನಾವು ಯಾವರೀತಿ ಪಾಲಕರ ಒಗ್ಗಟ್ಟಿನ ಮೂಲಕ ಸೌಲಭ್ಯಗಳನ್ನು ಪಡೆದುಕೊಳ್ಳಬಹುದು. ಎನ್ನುವುದರ ಕುರಿತು ಚರ್ಚೆ ಮಾಡಲಾಯಿತು. ಈ ಸಭೆಯಲ್ಲಿ ಶ್ರೀಮತಿ ಶಿವಕಾಂತಾ ಮಾಹಿತಿ ತಿಳಿಸಿದರು. 8 ಜನ ಪಾಲಕರು ಭಾಗವಹಿಸಿದರು.



## “ಬೆಳವಣಿಗೆ ಕುಂಠಿತ ಅರಿವಿನ ಕಾರ್ಯಕ್ರಮ”

ಜೂನ್ 11 2025ರಂದು ಸೇವಾಸಂಗಮ ಸಂಸ್ಥೆ ಮತ್ತು ಅಜೀಂ ಪ್ರೇಮ್ ಜೀ ಯವರ ಸಂಯೋಗದಲ್ಲಿ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಅಡಿಯಲ್ಲಿ ಬೆಳವಣಿಗೆ ಕುಂಠಿತ ವಿರುವ ಕುರಿತು ಕಲ್ಬುರ್ಗಿ ನಗರದ ಭವಾನಿನಗರ ಏರಿಯಾದ ಮೂರನೇ ಅಂಗನವಾಡಿ ಕೇಂದ್ರದಲ್ಲಿ ಅರಿವಿನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ಬೆಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳನ್ನು ಹೇಗೆ ಗುರಿತಿಸಬೇಕು, ಗುರುತಿಸಿದ ಮಕ್ಕಳನ್ನು ನಮ್ಮ ಸಂಸ್ಥೆಯ ವತಿಯಿಂದ ಯಾವರೀತಿ ಚಟುವಟಿಕೆಗಳು ನೀಡುತ್ತೇವೆ, ಮಗುವಿನಲ್ಲಿ ಯಾವರೀತಿ ಬದಲಾವಣೆ ಆಗುತ್ತದೆ ಮತ್ತು ಸರ್ಕಾರದ ಸೌಲಭ್ಯಗಳು ಕುರಿತು ಸಂಪೂರ್ಣ ಮಾಹಿತಿಯನ್ನು ಶ್ರೀಮತಿ ವಿಜಯಲಕ್ಷ್ಮಿ ಅವರು 10 ಜನ ಮಹಿಳೆಯರಿಗೆ ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿ ಇದ್ದರು.



## “ವಿಶ್ವ ಪರಿಸರ ದಿನಾಚರಣೆ”

ಜೂನ್ 5 2025ರಂದು ವಿಶ್ವ ಪರಿಸರ ದಿನಾಚರಣೆಯನ್ನು ಸರಕಾರಿ ಹಿರಿಯ ಪ್ರೌಢ ಶಾಲೆಯ ಮಕ್ಕಳೊಂದಿಗೆ ಆದರ್ಶನಗರದಲ್ಲಿ ಆಚರಣೆ ಮಾಡಲಾಯಿತು. ಈ ಒಂದು ಕಾರ್ಯಕ್ರಮದಲ್ಲಿ ಶಾಲೆ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛತೆ ಮಾಡುವುದು. ಕೇವಲ ವರ್ಷಕ್ಕೆ ಮಾತ್ರ ಪರಿಸರ ದಿನಾಚರಣೆ ಸೀಮಿತವಾಗದೆ ಪ್ರತಿನಿತ್ಯ ಪರಿಸರ ದಿನಾಚರಣೆಯನ್ನು ಆಚರಣೆ ಮಾಡುವ ಮೂಲಕ ಪ್ರತಿಯೊಬ್ಬರ ಮನೆಯಲ್ಲಿ ಸಸಿಹಚ್ಚುವುದರ ಮೂಲಕ ಪರಿಸರ ದಿನಾಚರಣೆ ಮಾಡುವುದು ಎಂದು ತಿಳಿಸಿದರು.



# ORBIT NGO

Non-Governmental Organization
Humnabad, Karnataka

Organization of Bidar Integral Transformation

## Scan this QR Code

## TO DONATE

www.orbitbidar.in

# SEVA SANGAMA

Organization for Social Concern Development

## Scan this QR Code

## TO DONATE

www.sevasangama.in

# ಸೇವಾ ಸಂಗಮ ಮತ್ತು ಆರ್ಬಿಟ್ ಸಂಸ್ಥೆ (NGO) ಗುಲ್ಬರ್ಗಾ ಧರ್ಮಕ್ಷೇತ್ರ

## Appeal

ಗುಲ್ಬರ್ಗಾ ಧರ್ಮ ಕ್ಷೇತ್ರವು ಉತ್ತರ ಕರ್ನಾಟಕದ ಹಿಂದುಳಿದ ಜಿಲ್ಲೆಗಳಾದ ಬೀದರ್, ಬಿಜಾಪುರ್, ಯಾದಗಿರಿ ಹಾಗೂ ಗುಲ್ಬರ್ಗಾ ಜಿಲ್ಲೆಗಳನ್ನು ಒಳಗೊಂಡಿದೆ. ಗುಲ್ಬರ್ಗಾ ಧರ್ಮಕ್ಷೇತ್ರವು ಉಗಮ ಆಗುವುದಕ್ಕಿಂತ ಮುಂಚೆ ಮಂಗಳೂರು ಧರ್ಮಕ್ಷೇತ್ರದಿಂದ ಗುರುಗಳು ಹಾಗೂ ಕನ್ಯಾ ಭಗಿನಿಯರು ಬೀದರ್ ಜಿಲ್ಲೆಯ ಸರ್ವತೋಮುಖ ಬೆಳವಣಿಗೆಗಾಗಿ ಶ್ರಮಿಸಿದ್ದಾರೆ. ಆರ್ಬಿಟ್ ಸಮಾಜ ಸೇವಾ ಸಂಸ್ಥೆಯ ಮುಖಾಂತರ 1993 ರಿಂದ ಆರೋಗ್ಯ, ಶಿಕ್ಷಣ, ಮಹಿಳಾ ಸಬಲೀಕರಣ, ಅಂಗವಿಕಲರ ಸಬಲೀಕರಣ ಹಾಗೂ ನಿರ್ಗತಿಕರಿಗೆ ಆಸರೆ ಒದಗಿಸುವ ಕೆಲಸವನ್ನು ಮಾಡಿದ್ದಾರೆ. ಹಾಗೆ 2005ನೇ ಇಸವಿಯಲ್ಲಿ ಗುಲ್ಬರ್ಗಾ ಧರ್ಮಕ್ಷೇತ್ರ ಉಗಮವಾದಾಗಿನಿಂದ ಈ ಸಮಾಜ ಸೇವಾ ಕೆಲಸವನ್ನು ನಾಲ್ಕು ಜಿಲ್ಲೆಗಳಲ್ಲಿ ಕೈಗೊಳ್ಳಲಾಯಿತು. ಸೇವಾ ಸಂಗಮ ಹಾಗೂ ಆರ್ಬಿಟ್ ಸಂಸ್ಥೆಗಳ ಮುಖಾಂತರ ಮಹಿಳಾ ಸಬಲೀಕರಣ, ಮಕ್ಕಳ ಶಿಕ್ಷಣ, ಅಂಗವಿಕಲರ ಕಾರ್ಯಕ್ರಮ, ಪರಿಸರ ಸಂರಕ್ಷಣೆ, ನಿರುದ್ಯೋಗಿಗಳಿಗೆ ಕೌಶಲ್ಯ ತರಬೇತಿ, ಮಾನಸಿಕ ಅಸ್ವಸ್ಥರಿಗೆ ಪುನರ್ವಸತಿ, ಎಂಟು ವರ್ಷಕ್ಕಿಂತ ಕೆಳಗಿನ ಬೆಳವಣಿಗೆಯಲ್ಲಿ ಕುಂಠಿತ ಹೊಂದಿದ ಮಕ್ಕಳಿಗೆ ಚಿಕಿತ್ಸೆ, ನೈಸರ್ಗಿಕ ವಿಪತ್ತು ನಿವಾರಣೆ, ಕ್ಯಾನ್ಸರ್ ಜಾಗೃತಿ ಆಂದೋಲನ, ಹೀಗೆ ಸಮಾಜದಿಂದ ಹಂಚಿಕೆ ತಳ್ಳಲ್ಪಟ್ಟ ಜನರಿಗೆ ಪುರ್ನವಸತಿ ನೀಡುವ ಕೆಲಸವನ್ನು ಈ ಎರಡು ಸಂಸ್ಥೆಗಳು ಮಾಡುತ್ತಿವೆ. ಹಲವಾರು ಕಾರ್ಯಕ್ರಮಗಳ ಮುಖಾಂತರ ನಮ್ಮ ಎರಡು ಸಂಸ್ಥೆಗಳು ಬಡವರಿಗೆ, ನಿರ್ಗತಿಕರಿಗೆ, ಶೋಷಿತರಿಗೆ, ಹಾಗೂ ವಿವಿಧ ಶೋಷಣೆಗಳಿಗೆ ಒಳಗಾದ ಜನರಿಗೆ ಸ್ಪೂರ್ತಿ, ಶಕ್ತಿ, ಹಾಗೂ ಜೀವವನ್ನು ತುಂಬುತ್ತವೆ. ಈ ಸೇವೆಗಳನ್ನು ಹೆಚ್ಚು ಜನರಿಗೆ ತಲುಪಿಸಲು, ನಿಮ್ಮ ಸಹಾಯ ಹಸ್ತವನ್ನು ಹಾಗೂ ನಮ್ಮೊಂದಿಗೆ ಸೇರಿ ಸುಂದರ ಸಮಾಜವನ್ನು ಕಟ್ಟಲು ನಿಮ್ಮ ನೆರವನ್ನು ಅಪೇಕ್ಷಿಸುತ್ತೇವೆ.

ಬನ್ನಿ ಉತ್ತಮ ಸಮಾಜವನ್ನು ಕಟ್ಟೋಣ.



**TO DONATE, SCAN THE QR CODE**

ನಿಮ್ಮ ಸಹಾಯದಿಂದ ಗುಲ್ಬರ್ಗಾ ಹಾಗೂ ಬೀದರ, ಕೋಳಗೇರಿ ನಿವಾಸ ಮಕ್ಕಳು ಉತ್ತಮ ಶಿಕ್ಷಣ ಪಡೆಯುತ್ತಾರೆ.

ನಿಮ್ಮ ಸಹಾಯದಿಂದ ವಿಶೇಷ ಚೇತನ ಮಕ್ಕಳು ತಮ್ಮ ಸಾಮರ್ಥ್ಯ ಹಾಗೂ ಕೌಶಲ್ಯಗಳು ಕಂಡುಕೊಳ್ಳುತ್ತಾರೆ.

ಪ್ರಾಯೋಜಕರು ಒಂದು ಟ್ಯೂಷನ್ ಸೇಂಟರ್ ಪ್ರತಿ ತಿಂಗಳು 4000/- ವರ್ಷಕ್ಕೆ 40,000/-

ಪ್ರಾಯೋಜಕರು ಒಂದು ಮಗು ರೂ.500 ಪ್ರತಿ ತಿಂಗಳು / ವರ್ಷಕ್ಕೆ 6000/-

ನೀವು ಧನ ಸಹಾಯ ಮಾಡಿದ ಮೇಲೆ ನಿಮ್ಮ ವಿಳಾಸ ಮತ್ತು PAN number ಕೆಳಗಿರುವ ಸಂಖ್ಯೆಗೆ WhatsApp ಮಾಡುವುದು.

**(Only for Indian Citizens)**

**Bank Account Details**

Name : Sevasangama Development Society
Account No : 16040100022902
IFSC Code : FDRL0001604
Bank : Federal Bank
Branch : Super Market Kalaburagi

Fr. Victor Anil Vas
Director, Seva Sangama & ORBIT

Address

Seva Sangama Development Society, Near Kendriya Vidyalaya, Kotnoor D, Kalaburagi, Karnataka-585102
Contact: 8660968063 / 9743112739 - Email: sevasangama2006@gmail.com / Website: www.sevasangama.in